ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ



- ಗಾಂಧಿಯು [illegible]
- ಶಸ್ತ್ರಾಸ್ತ್ರ ಪೈಪೋಟಿ : ಗುರಿ ಏನು?
- ತಾವೋ ಪದ್ಯಗಳು
- ಗಾಂಧೀ ಸವಾಲು

ಸಂಪುಟ : ೧೧ ಆಗಸ್ಟ್ ೧೯೮೦ ಸಂಚಿಕೆ : ೨

ಈ ಸಂಚಿಕೆಯಲ್ಲಿ

ನಿಮ್ಮೊಂದಿಗೆ	೧
ಗಾಂಧಿಯ ಮರೆತ ಮಂದಿ	೩
ಖಾಸಗಿ ಬದುಕು	೪
ಅಮೆರಿಕೆಯಿಂದ ಒಂದು ಪತ್ರ	೫
ಶಸ್ತ್ರಾಸ್ತ್ರ ಪೈಪೋಟಿ : ಗುರಿ ಏನು?	೭
ಧ್ಯಾನ ಮತ್ತು ಕರ್ಮ	೧೦
ನಮಗೆ ಬೇಕಾಗಿರುವ ಅರ್ಥವ್ಯವಸ್ಥೆ	೧೩
ಲಾವ್ರೋ ತ್ಸೆಯ ತಾವೋ ಪದ್ಯಗಳು	೧೭
ಶಾಶ್ವತ ಅರ್ಥಶಾಸ್ತ್ರ	೨೦
ಬೆಂಗಳೂರು, ಬೆಂಗಳೂರು...	೨೪
ಗಾಂಧೀ ಸವಾಲು	೨೬
ಸಂಕ್ಷಿಪ್ತ	೨೮

ಸಹಕರಿಸಲು ಬಿನ್ನಹ–

ಮುದ್ರಣ ವೆಚ್ಚ, ಕಾಗದದ ವೆಚ್ಚ ಹೆಚ್ಚಿರುವ ಕಾರಣ “ಜನಪದ ವಿಚಾರ”ದ ವಾರ್ಷಿಕ ಚಂದಾವನ್ನು ಹೆಚ್ಚಿಸುವುದು ಅನಿವಾರ್ಯವಾಗಿದೆ.

ಜುಲೈ ೧೯೮೦ ರ ಸಂಚಿಕೆಯಿಂದ ವಾರ್ಷಿಕ ಚಂದಾ ರೂಪಾಯಿ ಇಪ್ಪತ್ತೈದು [ರೂ. 25-00]. ದಯವಿಟ್ಟು ಸಹಕರಿಸಬೇಕಾಗಿ ವಿನಂತಿ.

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಸಂಪುಟ: ೧೧ ಮೇಲುಕೋಟೆ. ಆಗಸ್ಟ್ ೧೫, ೧೯೯೦ ಸಂಚಿಕೆ ೨

ನಿಮ್ಮೊಂದಿಗೆ........

ರಾಷ್ಟ್ರೀಯರಂಗ ಸರ್ಕಾರದ 'ನಾಟಕ' ಒಂದು ಹಂತ ತಲುಪಿದಂತಿದೆ. ದೇವೀಲಾಲ್ ಕಿತ್ತೆಸೆಯಲ್ಪಟ್ಟಿದ್ದಾರೆ. ತಿರುಗೇಟು ಕೊಡುವ ಸನ್ನದ್ಧತೆಯಲ್ಲಿ ಅಗಸ್ಟ್ ೯ ರಂದು ರ್‍ಯಾಲಿ ನಡೆಸುತ್ತಿದ್ದಾರೆ. ಅವರ ಘೋಷಣೆಯನ್ನು ಗಮನಿಸಿ – 'ಲೂಟಿಕೋರ ಪಟ್ಟಣಿಗರೇ, ನಮ್ಮ ಬೆನ್ನಿನಿಂದಿಳಿಯಿರಿ!'

ಗ್ರಾಮೀಣ ಸಮುದಾಯದ ಪ್ರತಿನಿಧಿ ಮತ್ತು ಉದ್ಧಾರಕ – ಎರಡೂ ತಾನೇ ಎಂಬ ಧಾಟಿಯಲ್ಲಿ ದೇವಿಲಾಲ್ ಮಾತನಾಡುತ್ತಿದ್ದಾರೆ. ತುಂಬಾ ಆಪ್ಯಾಯಮಾನ ಘೋಷಣೆಯಾದ ಇದು ತೀರಾ ಅಪಾಯಕಾರಿಯಾದದ್ದು ಕೂಡಾ. ಹರಿಯಾಣವನ್ನು ತಮ್ಮ ಉಗ್ರಾಣವೆಂದು ಬಗೆದ ಈ ವ್ಯಕ್ತಿ, ಈಗ ಹಿಂದುಳಿದವರ ಬಗ್ಗೆಯೂ ಮಾತಾಡುತ್ತಿದ್ದಾರೆ. ಗ್ರಾಮೀಣ ಭಾರತದ ಭೂಮಿವಂತ ಬಲಾಢ್ಯ ಜಾಟ್ ಜಾತಿಯಿಂದಾಚೆ ನೋಡಲಾರದ ಈತ ದಲಿತರ ಭಾವುಕ ಸ್ಪಂದನದ ಬೆಂಬಲವನ್ನು ಪಡೆಯಲೆತ್ನಿಸುವ ಈ ತಂತ್ರ ಭಾರತದ ರಾಜಕಾರಣದ ಹೊಸ ಶಾಪವಾದೀತು.

'೭೭ ರ ಪ್ರಯೋಗದ ದುರಂತ ಅಂತ್ಯದ ಭಯಕ್ಕೇ ಅದುರಿ ಬೀಳುವ ಸದ್ಯದ ಅಧಿಕಾರಸ್ಥರು ಸರ್ಕಾರ ಬೀಳಲು ಬಿಡಲಾರರು. ಅಧಿಕಾರದಲ್ಲಿ ಉಳಿಯುವುದೇ ಹೆಗ್ಗಳಿಕೆಯಾದಾಗ ಜನ ಕಲ್ಯಾಣ ಮರೆತ ಮಾತಾಗುತ್ತದೆ.

ಕಾಂಗ್ರೆಸ್ ಬಿಟ್ಟುಹೋದ ಭೀಕರ ಸ್ಥಿತಿಯೇ ಹೊಸ ಚೇತನೆಗೆ ಚಾಲನೆ ಕೊಡಬೇಕಿತ್ತು. ಆರ್ಥಿಕ ಚಿಂತನೆಯ ಹೊಸ ಹೂಟಗಳನ್ನು ಗಮನಿಸಿ : ಆ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ. ದೃಷ್ಟಾರತನದ ಎತ್ತರ, ಆದರ್ಶದ ಉತ್ಸಾಹ, ಪ್ರಾಮಾಣಿಕತೆಯ ಉಜ್ವಲತೆ – ಇವಾವೂ ಇಲ್ಲದಿರುವ ತಂತ್ರಗಾರ ರಾಜಕಾರಣಿಗಳ ಗುಂಪೊಂದು ದೇಶವನ್ನು ಮುನ್ನಡೆಸುವಂತೆ ತೋರುತ್ತಿದೆ.

ಒಂದು ಕ್ಷಣ – ಗಾಂಧಿಯನ್ನು ನೆನೆಸಿಕೊಳ್ಳಿ. ಈ ದೇಶದಲ್ಲಿದ್ದ ಮೂವತ್ತು ವರ್ಷಗಳಲ್ಲಿ ಹತ್ತು ವರ್ಷಗಳ ಅಂತರದಲ್ಲಿ ಮೂರು ಚಳುವಳಿ ಹೂಡಿದ ಗಾಂಧಿ ಸದಾ ಅಧಿಕಾರ, ಕೀರ್ತಿ, ಜಾತಿ ರಾಜಕಾರಣದಿಂದ ಆಚೆ ಉಳಿದರು.

ಈ ದೇಶಕ್ಕೊಪ್ಪುವ ಆರ್ಥಿಕತೆ, ಕೈಗಾರಿಕೆ, ಶಿಕ್ಷಣಗಳ ಬಗ್ಗೆ ಚಿಂತಿಸುತ್ತಾ, ಜಾತಿ, ಕೋಮು ಸಾಮರಸ್ಯಗಳ ಬಗ್ಗೆ ದುಡಿಯುತ್ತಾ ದಿನಗಳೆದ ಗಾಂಧಿಯ ಬಳಿ ಕುಟುಂಬ, ಜಾತಿ ಮೋಹಗಳು ಒಮ್ಮೆಯೂ ಸುಳಿಯಲಿಲ್ಲ.

ಆದಕ್ಕೇ ಇಂದು ರಾಜಕಾರಣಿಗಳಿಗಷ್ಟೇ ಅಲ್ಲ, ಹೆಚ್ಚಿನ ಶಿಕ್ಷಿತರಿಗೂ ಗಾಂಧಿಯ ರಾಜಕೀಯ ಸಂಸ್ಕೃತಿ ಮತ್ತು ಕಾರ್ಯವಿಧಾನ ಆಪ್ಯಾಯಮಾನವಾಗುವುದು ಸಾಧ್ಯವೇ ಇಲ್ಲ. ಪಾಪಪ್ರಜ್ಞೆಯನ್ನು ಮೂಡಿಸಿ, ಬೆಚ್ಚಿ ಬೀಳಿಸುವ, ಕಾಡುವ ನೆನಪಾಗಿ ಗಾಂಧಿ ಉಳಿದಿದ್ದಾರೆ.

ಇನ್ನೊಂದು ಸ್ವಾತಂತ್ರ್ಯೋತ್ಸವ ಬಂದಿದೆ. ಯಾವುದೇ ಅರ್ಥಪೂರ್ಣ ಕ್ರಿಯೆ, ಆದರ್ಶ, ನಿರ್ಧಾರಗಳನ್ನೂ ಪ್ರಚೋದಿಸದ ವ್ಯರ್ಥ ಆಣಕವಾಗಿ ಈ ದಿನ ಪರಿಣಮಿಸಿದೆ.

ಗಾಂಧಿ ನೆನಪನ್ನು ಗಾಢವಾಗಿ ಉಳಿಸಿಕೊಂಡಿರುವ ಸರ್ವೋದಯ ಹಿರಿಯರು **'ಗಾಂಧಿ ಸವಾಲು'** ಎಂಬ ಕಾರ್ಯಕ್ರಮದಲ್ಲಿ ಗಾಂಧಿ ವಿಚಾರವನ್ನು ಈ ದೇಶದ ಹಳ್ಳಿ ಹಳ್ಳಿಗಳಿಗೆ ತಲುಪಿಸುವ ನಿರ್ಧಾರ ಮಾಡಿದ್ದಾರೆ.

ಇದಕ್ಕೆ ಸ್ವಾತಂತ್ರ್ಯೋತ್ತರ ತಲೆಮಾರಿನ ಪ್ರತಿಕ್ರಿಯೆಯೇನು ? ★
ಈ ಸಂಬಂಧದ ಪರಿಚಾಯತ್ಮಕ ಲೇಖನವೊಂದು ಬೇರೆಡೆ ಬಂದಿದೆ.

* * *

ಈ ಸಂಚಿಕೆಯಲ್ಲಿ ಎರಡು ಪತ್ರಗಳನ್ನು ಪ್ರಕಟಿಸಿದ್ದೇವೆ. ಒಂದು – ಅಮೇರಿಕೆಯಲ್ಲಿರುವ ವಿದ್ಯಾರ್ಥಿಯ ವಿಷಾದ. ಇನ್ನೊಂದು, ನಮ್ಮದೇ ಬೆಂಗಳೂರಲ್ಲಿರುವ ಕೊಂಚ ಮಾನಸಿಕ ಅಸ್ವಸ್ಥತೆಯುಳ್ಳ ವ್ಯಕ್ತಿಯದ್ದು. ಭಾವುಕ ಪ್ರತಿಕ್ರಿಯೆ ಎಂದು ಲಿತ್ಯ ಹಾಕುವ ಮೊದಲು ಈ ಭಾವಪೂರ ಹೊಮ್ಮಿಸುವ ಕಾರ್ಯಕಾರಣ ಸಂಬಂಧದ ಭೀಕರತೆಯ ಬಗ್ಗೆ ಯೋಚಿಸಬಹುದಲ್ಲ?

– ಕೆ. ಪಿ. ಸುರೇಶ್

(ಸಂಪಾದಕೀಯ ಮಂಡಳಿಯ ಪರವಾಗಿ)

ಗಾಂಧಿಯ ಮರೆತ ಮಂದಿ

ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ ಸ್ಥಾಪಿಸಿದ ಟಾಲ್‌ಸ್ಟಾಯ್ ಫಾರ್ಮ್ ಮತ್ತು ಫೀನಿಕ್ಸ್ ಸೆಟ್ಲ್‌ಮೆಂಟ್ ಎರಡೂ ಆರು ವರ್ಷಗಳ ಹಿಂದೆ ಹಿಂಸಾಕೃತ್ಯಗಳಿಂದಾಗಿ ಅರೆಬರೆ ನಾಶವಾಗಿತ್ತು. ಇಂದು ಶಿಥಿಲ ಸ್ಥಿತಿಯಲ್ಲಿರುವ ಈ ಕೇಂದ್ರದಲ್ಲಿ ವಾಸಿಸಲು ಒಬ್ಬನೇ ಒಬ್ಬ ಭಾರತೀಯನೂ ತಯಾರಿಲ್ಲ. ಗಾಂಧೀಜಿ ಈ ಕೇಂದ್ರದಲ್ಲಿ ವಾಸಿಸಿದ್ದರು ಎನ್ನುವುದೇ ದಕ್ಷಿಣ ಆಫ್ರಿಕಾದ ಹೊಸ ತಲೆಮಾರಿನ ಭಾರತೀಯರಿಗೆ ಮರೆತು ಹೋದಂತಿದೆ.

೧೯೬೯ ರಲ್ಲಿ ಗಾಂಧಿ ಶತಾಬ್ದಿ ಕಮಿಟಿ ಮಾಡಿ ಈ ಕೇಂದ್ರವನ್ನು ಪುನರುಜ್ಜೀವನಗೊಳಿಸುವ ಉದ್ದೇಶ್ಯದಿಂದ ಸಾಕಷ್ಟು ಹಣ ಸಂಗ್ರಹವನ್ನು ಮಾಡಲಾಯಿತು. ಆಮೇಲೆ ಎಲ್ಲರಿಗೂ ಗಾಂಧಿ ನೆನಪೇ ಮಾಸಿಹೋಯಿತು. ವರ್ಷಗಟ್ಟಲೆಯ ನಿರ್ಲಕ್ಷದಿಂದಾಗಿ ಮನೆಯ ಬಾಗಿಲು ಜಂತಿಗಳು ಕಳುವಾಗಿವೆ. ಯಾವ ಭಾರತೀಯನೂ ಇಲ್ಲಿರಲು ಇಷ್ಟಪಡದ ಕಾರಣ ಉಸ್ತುವಾರಿಯನ್ನು ನೋಡಿಕೊಳ್ಳಲೆಂದು ನೀಗ್ರೋ ಕುಟುಂಬವೊಂದನ್ನು ಇಲ್ಲಿ ನೇಮಿಸಲಾಗಿದೆ. ಈ ಕುಟುಂಬಕ್ಕೆ ತಾವೆಂಥಾ ಚಾರಿತ್ರಿಕ ಮನೆಯಲ್ಲಿದ್ದೇವೆಂದು ಗೊತ್ತಿಲ್ಲ. ಇವರು ಗಾಂಧಿ ಹೆಸರನ್ನು ಎಲ್ಲೋ ಅಸ್ಪಷ್ಟವಾಗಿ ಕೇಳಿದ್ದಾರಂತೆ. ಈ ಕುಟುಂಬದ ಹುಡುಗ ಎಜಿಕಿಲ್ ಮಸಿಲೇರಾನ ಬಳಿ ಗಾಂಧೀಜಿಯ ಫೋಟೊ ಒಂದಿದೆ. ಸ್ಕೂಲಿನಲ್ಲಿ ತನ್ನ ಮಾಸ್ತರು ಗಾಂಧಿ ಬಗ್ಗೆ ಹೇಳಿದ್ದು ಕೇಳಿ ಸಂಗ್ರಹಿಸಿಟ್ಟುಕೊಂಡನಂತೆ.

ಜೋಹಾನ್ಸ್‌ಬರ್ಗ್‌ನಿಂದ ಈ ಫಾರ್ಮ್ ಕೇವಲ ೩೫ ಕಿ. ಮಿ. ದೂರದಲ್ಲಿದೆ. ಸೈಕಲ್ ತುಳಿದುಕೊಂಡು ಗಾಂಧಿ ಈ ಫಾರ್ಮ್‌ನಿಂದ ಜೋಹಾನ್ಸ್‌ಬರ್ಗ್‌ಗೆ ಹೋಗುತ್ತಿದ್ದರು. ಇಂದು ದಕ್ಷಿಣಆಫ್ರಿಕಾದ ಯಾವ ಭಾರತೀಯನಿಗೂ ಈ ಚರಿತ್ರಾರ್ಹ ಕೇಂದ್ರ ಬೇಡವಾಗಿದೆ. ಗಾಂಧಿಯನ್ನು ಮರೆತದ್ದರ ಸಂಕೇತವಾಗಿ ಬಹುಶಃ ಇಂದು ಈ ಶಿಥಿಲ ಕೇಂದ್ರ ಉಳಿದಿದೆ. ★

ಖಾಸಗಿ ಬದುಕು

ದಕ್ಷಿಣ ಆಫ್ರಿಕಾದ ಇನ್ನೊಂದು ವರದಿ ವರ್ಣಭೇದದ ಭೀಕರ ಮುಖವನ್ನು ಅನಾವರಣಗೊಳಿಸುತ್ತದೆ. ' ಖಾಸಗಿ ಬದುಕು ' ಎಂಬ ಹೆಸರಿನಲ್ಲಿ ಈಗ ಚಿತ್ರವಾಗಿರುವ ಈ ಘಟನೆ ಒಬ್ಬ ಬಿಳಿಯ ಪೋಲೀಸ್ ಮತ್ತು ವರ್ಣೀಯ ಹೆಂಗಸಿನ ಪ್ರೇಮಕ್ಕೆ ಸಂಬಂಧಿಸಿದ್ದು. ಜಾಕ್ ಒಬ್ಬ ಪೋಲೀಸ್ ಕಾನ್ಸ್‌ಟೇಬಲ್ ಸ್ಟೆಲ್ಲಾ ಡುಪಾಂಟ್ ಹೋಟೆಲಿನಲ್ಲಿ ಪರಿಚಾರಿಕೆಯಾಗಿದ್ದವಳು. ಅವರಿಬ್ಬರ ವಿವಾಹಕ್ಕೆ ಅಂತರ್‌ವರ್ಣೀಯ ವಿವಾಹ ನಿಷೇಧ ಕಾಯಿದೆ ಅಡ್ಡಿಯಾಯಿತು. ಪದೇ ಪದೇ ಅರ್ಜಿ ಗುಜರಾಯಿಸಿ, ಮನವಿ ಸಲ್ಲಿಸಿ, ತಿರಸ್ಕೃತವಾಗಿ, ಮದುವೆಯೇ ಇಲ್ಲದೇ ಜೊತೆಯಲ್ಲಿ ಬಾಳಿದ ಈ ಜೋಡಿಗೆ ಈಗ ಐದು ಜನ ಮಕ್ಕಳು. ಅಧಿಕೃತ ವಿವಾಹ ದಾಖಲಾತಿ ಇಲ್ಲದ ಕಾರಣ ಈ ಮಕ್ಕಳಿಗೂ ವಿದ್ಯಾಭ್ಯಾಸವಿಲ್ಲ.

ಈ ಪ್ರೇಮ ಇಂದು ನಿನ್ನೆಯದಲ್ಲ ; ೧೯೫೦ ರಷ್ಟು ಹಳೆಯದು. ಅದು ಸಾರ್ವಜನಿಕರ ಗಮನ ಸೆಳೆದದ್ದು ಅತ್ಯಂತ ದಾರುಣ ನಾಟಕೀಯ ಕಾರಣದಿಂದಾಗಿ. ಸ್ಟೆಲ್ಲಾನ ಹಿರಿಯ ಮಗ ಗ್ರಹಾಂ ತನ್ನ ಬಿಳಿಯ ಪ್ರಿಯತಮೆಯನ್ನು ವಿವಾಹವಾಗದೇ ರೈಲಿನಡಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ. ಈ ದುರಂತ ಆತನ ಹೆತ್ತವರ ಸ್ಥಿತಿಯನ್ನು ಜಾಹೀರುಗೊಳಿಸಿತು. ಈ ದುರಂತ ಘಟಿಸಿ ಏಳು ವರ್ಷಗಳ ಬಳಿಕವಷ್ಟೇ ಜಾಕ್ ಮತ್ತು ಸ್ಟೆಲ್ಲಾರ ವಿವಾಹಕ್ಕೆ ಬಿಳಿಯ ಸರ್ಕಾರ ಅಧಿಕೃತ ಒಪ್ಪಿಗೆನೀಡಿತು. ಇಂದು ಸ್ಟೆಲ್ಲಾ ೬೩ ರ ವಯಸ್ಸಿನ ಮುದುಕಿ. ಪಾರ್ಶ್ವವಾಯುವಿನಿಂದಾಗಿ ಹಾಸಿಗೆ ಹಿಡಿದಿದ್ದಾಳೆ.

ವರ್ಣಭೇದ ಕಾನೂನು ದಕ್ಷಿಣ ಆಫ್ರಿಕಾದಲ್ಲಿ ಮೊದಲು ಜಾರಿಗೆ ಬಂದದ್ದು ೧೬೬೦ ರಲ್ಲಿ - ಮೂರೂವರೆ ಶತಮಾನಗಳ ಬಳಿಕ ಈಗ ಅದು ಶಿಥಿಲವಾಗುತ್ತಿದೆ.

ಈ ಅವಮಾನವೀಯ ದಬ್ಬಾಳಿಕೆಗೆ ಕಳೆದ ಮೂರು ಶತಮಾನಗಳಲ್ಲಿ ಅದೆಷ್ಟು ಸ್ಟೆಲ್ಲಾರು ಬಲಿಯಾಗಿರಬಹುದು ? ಉದಾರ ಮಾನವೀಯ ಮೌಲ್ಯಗಳ ತುರುಬು ಮುಚ್ಚಿಕೊಳ್ಳುವ ಪಶ್ಚಿಮದ ಕರಾಳ ಮುಖ ಇದು. ಮನುಷ್ಯನ ಪ್ರಗತಿ, ಉದ್ಧಾರ, ವಿಕಾಸ– ಹಾಗಂದರೇನು ?

[ಅಶ್ವಿನ್ ಸರೀನ್‌ರ ವರದಿ ಆಧರಿಸಿ]

ಅಮೇರಿಕೆಯಿಂದ ಒಂದು ಪತ್ರ

ಜೈದೀಪ್ ಮುಖರ್ಜಿ ದೆಹಲಿಯ ಐ. ಐ. ಟಿ. ನಲ್ಲಿ ಶ್ರೀ ಟಿ. ಎಸ್ . ಅನಂತು ಅವರ ವಿದ್ಯಾರ್ಥಿಯಾಗಿದ್ದಾತ. ಉಚ್ಚ ವಿದ್ಯಾಭ್ಯಾಸಕ್ಕಾಗಿ ಅಮೆರಿಕ್ಕಾಕೆ ತೆರಳಿದ ಆತ ಜೂನ್ ೩, ೧೯೯೦ ರಂದು ಅನಂತು ಅವರಿಗೆ ಬರೆದ ಪತ್ರದ ಒಂದು ಭಾಗ ಇದು. – ಸಂ.

ಅಮೇರಿಕೆಯಲ್ಲಿ ನಾನು ಏನನ್ನು ಎದುರಿಸಬಹುದು, ಏನನ್ನು ಅನುಭವಿಸಿಯೇನು ಎಂಬುದು ನಿಮಗೆ ಗೊತ್ತಿತ್ತೆನಿಸುತ್ತೆ. ನೀವು ತೊರೆದು ಬಂದ ದೇಶಕ್ಕೆ ನನ್ನ ಕಳಿಸಿದ್ದಕ್ಕೆ ಏನೋ ಕಾರಣವಿರಬೇಕು.

ಎರಡೇ ವರ್ಷದಲ್ಲಿ ನನಗೆ ತುಂಬಾ ವಯಸ್ಸಾಗಿದೆ ಅನಿಸುತ್ತಿದೆ. ವಿವೇಕಿಯೋ, ಪ್ರೌಢನೋ ಹೇಳಲಾರೆ. ಆದರೆ ತೀವ್ರ ಗೊಂದಲ, ವಿಚಿತ್ರ ಅಸುಖ ತುಂಬಿದೆ. ಈ ಜಗಳ ನನ್ನೊಳಗೇ ಹೊರತು ಬಹಿರಂಗದ ಮಂದಿಯ ಜೊತೆಗಲ್ಲ. ಒಮ್ಮೊಮ್ಮೆ ಉಳಿದವರ ಜೊತೆ ಕಾಲು ಕೆರೆಯುವ ಮನೋಭಾವ ತಾಳಿರುತ್ತೇನೆ. ತಕ್ಷಣವೇ, ಕ್ಷಮಿಸೋಣ, ಮರೆಯೋಣ ಅನ್ನಿಸುತ್ತೆ. ನನ್ನ ಇಡೀ ಬದುಕು ಈ ಹುಚ್ಚು ಓಟಕ್ಕಿಂತ ಹೆಚ್ಚು ಮೌಲಿಕವಾದದ್ದು ಎಂಬ ಅರಿವಿನ ಮೂಲಕ ಈ ಭಾವನೆಗಳು ಹುಟ್ಟುತ್ತವೆ. ನನ್ನ ಬಗ್ಗೇನೆ ನನಗೆ ಖಚಿತತೆ ಇಲ್ಲದಿರೋ ಕಾರಣ ಇದೇ ನನ್ನ ದೌರ್ಬಲ್ಯವೇನೋ ಅನಿಸುತ್ತೆ.

ಇಲ್ಲಿ ಯಶಸ್ವಿಯಾಗೋದಕ್ಕೆ, ಕಾಲು ಕೆರೆಯೋದಕ್ಕೆ, ಧಾಷ್ಟ್ರ್ಯ ಪೌರುಷ ಬೆಳೆಸಿಕೊಳ್ಳುವುದಕ್ಕೆ ಈ ಅಮೇರಿಕನ್ನರಲ್ಲಿ ಹತ್ತಾರು ತಂತ್ರಗಳಿವೆ. ಇವೆಲ್ಲ ನನ್ನನ್ನು ಖಿನ್ನನನ್ನಾಗಿಸಿದೆ. ಒಂದೆಡೆ ಇವರೆಲ್ಲ ಅದೇನು ಮಾಡ್ತಿದಾರೋ ಅದನ್ನು ನಾನು ಇನ್ನೂ ಚೆನ್ನಾಗಿ ಮಾಡಬಲ್ಲೆ ಅನ್ನುವ ಭಾವನೆ. ಇನ್ನೊಂದೆಡೆ ನನಗೆ ಆ ಬಗ್ಗೆ ಅಷ್ಟು ಖಚಿತ ಆತ್ಮವಿಶ್ವಾಸವಿದ್ದರೆ, ನಾನೊಲ್ಲದ ಇವನ್ನೆಲ್ಲಾ ಯಾಕೆ ಮಾಡಬೇಕು ಅನ್ನಿಸುತ್ತೆ. ಇಲ್ಲಿ ಈ ಓಟದಲ್ಲಿ ಯಶ ಪಡೆಯದಿದ್ದರೆ ಆಟದಲ್ಲಿ ಸೋತಂತೆ.

ಆಮೇಲೆ ತಾನಿಷ್ಟ ಪಡದೇ ಇರುವ ಕೆಲಸ ಮಾಡಿಕೊಂಡು ಯಾರದೋ ಶೋಷಣೆಗೆ ತುತ್ತಾಗಿ ಬಾಳಬೇಕಾಗುತ್ತೆ. ಅಂತಹ ಪ್ರವೃತ್ತಿ ಇಲ್ಲದಿದ್ದರೆ ಇಲ್ಲಿ ನಾಲಾಯಕ್ಕು ಅನಿಸಿಕೊಳ್ಳಬೇಕಾಗುತ್ತೆ (ಈ ಹಂತಕ ಪ್ರವೃತ್ತಿಯ ಅಭಾವದಿಂದಲೇ ಏಷ್ಯಾ, ಆಫ್ರಿಕಾದ ದೇಶಗಳು ವಸಾಹತುಶಾಹಿ ತುಳಿತಕ್ಕೊಳಗಾದವೇ?)

ಶೋಷಣೆಗೆ ತುತ್ತಾಗಿದ್ದೇನೆ ಎಂದು ಭಾವಿಸಿಕೊಂಡವನು ಸಡ್ಡು ಹೊಡೆಯುವ ಮನೋಭಾವದಲ್ಲಿರುತ್ತಾನೆ. ಮಹಿಳೆಯರಂತೂ ಇಲ್ಲಿ ಬದುಕಿನ ಎಲ್ಲಾ ರಂಗಗಳಲ್ಲೂ ಗಂಡಸರನ್ನು ಸರಿಗಟ್ಟುತ್ತಿದ್ದಾರೆ. ಆದರೆ ಮತ್ತೆ ಅದೇ ಶೋಷಿತನ ಬಿರುಸು, ಸಡ್ಡು, ಜಿದ್ದು. ಈ ವಿಷವೃತ್ತ ಹೀಗೇ ಮುಂದುವರಿಯುತ್ತೆ. ಪರಿಣಾಮ ಏನೆಂದರೆ ಸಾಮಾಜಿಕ ಸಂಬಂಧಗಳೆಲ್ಲಾ ಪೆಡಸಾಗುತ್ತೆ. ವ್ಯಾವಹಾರಿಕವಾಗಿ ನಡಕೊಳ್ಳ ಹತ್ತುತ್ತೇವೆ. ಪರಸ್ಪರ ವಿಶ್ವಾಸ ಮಾಯವಾಗಿರುತ್ತೆ. ಈ ಬದುಕಿನ ಸ್ವಲ್ಪ ಆಳಕ್ಕಿಳಿದರೆ ಮಕ್ಕಳ ಶೋಷಣೆ, ಹೆಂಡಂದಿರಿಗೆ ಹೊಡೆಯುವುದು, ಮಾನಭಂಗ ಇಲ್ಲೂ ನಡೆಯುತ್ತಿರುತ್ತೆ. ಭಾರತದಲ್ಲೂ ಇದು ಜರುಗುತ್ತೆ. ಆದರೆ ವ್ಯತ್ಯಾಸ ಏನೆಂದರೆ, ನಾವೆಲ್ಲ ಕನಸುವಂಥಾ ಬಾಳು ನಡೆಸುವ ಸುಶಿಕ್ಷಿತ, ಸುಖೀ ಅಮೇರಿಕೆಯಲ್ಲೂ ಇದು ನಡೆಯುತ್ತೆ ಎಂಬೋದು ಒಮ್ಮೊಮ್ಮೆ ನಾನು ಸಿನಿಕನೇನೋ, ಈ ಸಮಾಜವನ್ನ ಸಾಕಷ್ಟು ನೋಡಿಲ್ವೇನೋ, ನಾನು ಭಾರತೀಯನಾಗಿರೋ ಕಾರಣದಿಂದಲೇ ಹುಟ್ಟುವ ಸಾಂಸ್ಕೃತಿಕ ಭಿನ್ನತೆ ಈ ರೀತಿ ನೋಡುವಂತೆ ಮಾಡ್ತಿದೆಯೋನೋ ಅನ್ನಿಸುತ್ತೆ.

ಕೆಲವೊಮ್ಮೆ ಕೆಟ್ಟದ್ದೇನಾದರೂ ಜರುಗಿದರೆ ನನ್ನನ್ನೆ ನಾನು ಶಪಿಸಿಕೊಳ್ತೇನೆ. ಏನನ್ನಾದರೂ ಪರಾಮರ್ಶೆ ಮಾಡೋಣವೆಂದರೆ ಪೂರ್ಣ ವಿವರಗಳೇ ನನ್ನಲ್ಲಿಲ್ಲವೇನೋ ಎನಿಸುತ್ತೆ. ವಿಚಿತ್ರ ಅಂದರೆ ಮಾನುಷ ಸಮಸ್ಯೆಗಳೆಲ್ಲ ವಿಶ್ಲೇಷಣೆಗೆ ಮೀರಿದ್ದೇನೋ. ನನ್ನ ಸ್ವಾರ್ಥ ಇದಕ್ಕಂಟಿಕೊಂಡಿರುವ ಕಾರಣದಿಂದಾಗಿಯೇ ನನಗೇನೂ ಸಾಧ್ಯವಾಗುತ್ತಿಲ್ಲವೇನೋ. ನಾನು ಪ್ರಾಮಾಣಿಕತೆ ಮತ್ತು ಸ್ವಾರ್ಥಗಳೆರಡನ್ನೂ ಸಮತೋಲನಗೊಳಿಸಲು ಒದ್ದಾಡುತ್ತಿರುತ್ತೇನೆ. ಸ್ವಾರ್ಥದ ಗುರಿ ತಲುಪಲು ನೀವು ಪ್ರಾಮಾಣಿಕ ದಾರಿ ಬಳಸುತ್ತೀರೋ ಇಲ್ಲ ಕಳ್ಳದಾರಿ ಹಿಡಿಯುತ್ತೀರೋ ಅನ್ನುವುದೇ ಅಗ್ನಿಪರೀಕ್ಷೆ. ವಿವರಗಳೇನೂ ಬೇಕಿಲ್ಲ ಬಿಡಿ ; ಕಳೆದ ಐದು ತಿಂಗಳಿಂದ ನಾನು ಈ ನರಕ ಯಾತನೆ ಅನುಭವಿಸುತ್ತಿದ್ದೇನೆ.

ಒಮ್ಮೊಮ್ಮೆ ಎದುರಿಗಿರುವವರ ಬಳಿ ಕಾಲು ಕೆರೆದು ಜಗಳಾಡಿಬಿಡೋಣ ಅನ್ನಿಸುತ್ತೆ. ಮತ್ತದೇ ಕ್ಷಮೆ, ಮರೆಯುವ ಸದ್ಗುಣಗಳು. ಕೊನೆಗೂ ನಾನು ಬಯಸಿದ್ದೇ ಆಗುತ್ತದೆಂದಲ್ಲ. ಅಪಾರ್ಥ ಮಾಡಿಕೊಳ್ಳುವವರೇ ಹೆಚ್ಚು. ಮನಸ್ಸು ಮತ್ತೆ ಮತ್ತೆ ನೋವಿನಿಂದ ತುಂಬುತ್ತೆ.

೧೨ ನೇ ಪುಟ ನೋಡಿ

ಶಸ್ತ್ರಾಸ್ತ್ರ ಪೈಪೋಟಿ : ಗುರಿ ಏನು?

— ಸುಘೋಷ್ ಕೌಲಗಿ

ಇತಿಹಾಸದ ಉದ್ದಕ್ಕೂ ಒಂದು ದೇಶದ ರಾಷ್ಟ್ರರಕ್ಷಣಾ ಶಕ್ತಿಯನ್ನು ತನ್ನ ದೇಶದ ಮೇಲಿನ ಆಕ್ರಮಣ ಅಥವಾ ದೇಶದೊಳಗಿನ ದಂಗೆಯನ್ನು ತಡೆಗಟ್ಟಲು ಆ ದೇಶವು ಹೊಂದಿರುವ ಸೇನಾ ತಾಕತ್ತಿನಿಂದ ಅಳೆಯಲಾಗುತ್ತಿದೆ. ಆದರೆ ಸೇನೆಯ ಮೇಲೆ ಅತಿಯಾದ ಅವಲಂಬನೆ ಒಂದು ವಿಧದಲ್ಲಿ ದೇಶದ ಭದ್ರತೆ ಮತ್ತು ಕ್ಷೇಮಕ್ಕೆ ಪ್ರತಿಕೂಲವಾಗಿದೆ. ಸೇನಾ ಸಾಕಾಣಿಕೆ ಪ್ರತಿಯೊಂದು ದೇಶಕ್ಕೂ ಭಾರಿ ಹೊರೆಯಾಗಿದೆ. ದೇಶ ಬಡವಾಗಲೀ, ಶ್ರೀಮಂತವಾಗಲೀ ಇದರ ಹೊರೆಯನ್ನು ಭರಿಸಲೇಬೇಕು. ಸೇನೆಯನ್ನು ಸಲಹುವುದು ಬಿಳಿ ಆನೆ ಸಾಕಿದಂತೆ. ಇದರ ಮೇಲಿನ ವೆಚ್ಚ ಪ್ರತಿಯೊಂದು ದೇಶದ ಆದಾಯವನ್ನು ಒಳಗಿಂದ ಒಳಗೇ ತಿಂದು ಹಾಕುತ್ತಿದೆ. ಅಲ್ಲದೆ ಹೆಚ್ಚೆಚ್ಚು ಮಾರಕಾಸ್ತ್ರಗಳ ಬಳಕೆಯಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ ಜನರಲ್ಲಿ, ಸರ್ಕಾರಿ ವಲಯಗಳಲ್ಲಿ ಭೀತಿ ಹುಟ್ಟಿಸಿದೆ. ಅನೇಕ ರೀತಿಯ ಮಾರಕ ಶಸ್ತ್ರಾಸ್ತ್ರಗಳ ಯದ್ವಾತದ್ವಾ ಬಳಕೆಯಿಂದ ಹವಾಮಾನದಲ್ಲಿ ಏರುಪೇರು ಉಂಟಾಗುತ್ತಿದೆ. ಓಜೋನ್ ಪದರ ಸವೆದು ತೂತು ಬೀಳುತ್ತಿದೆ. ವ್ಯವಸಾಯ ದುರ್ಬಲವಾಗುತ್ತಿದೆ. ಸತತ ಪರಿಸರ ನಾಶವಾಗುತ್ತಲೇ ಇದೆ. ಇವೆಲ್ಲವೂ ಸೇರಿ ಇಡೀ ಭೂಮಂಡಲವನ್ನೇ ನಿಧಾನವಾಗಿ ಅತಿಯಾದ ಪ್ರಪಾತದ ಕಡೆಗೆ ಎಳೆಯುತ್ತಿವೆ. ಈ ಎಲ್ಲ ಸಂಗತಿಗಳು ವಿಶ್ವ ಮಾನವಕೋಟಿಯ ಉಳಿವು, ಭದ್ರತೆ, ಕ್ಷೇಮ ಮತ್ತು ಅಭಿವೃದ್ಧಿಗೆ ಮೊದಲ ಶತ್ರುಗಳಾಗಿವೆ. ಪರಿಸರ ನಾಶ ಹೀಗೆಯೇ ಮುಂದುವರೆದರೆ ಅದರ ಜೊತೆಗೆ ಮಾನವನ ಅಸ್ತಿತ್ವವೂ ನಾಶವಾಗಿ ಬಿಡುತ್ತದೆ. ಪರಿಸರ ನಾಶದಿಂದ ಉಂಟಾಗಿರುವ ಹೆದರಿಕೆ ಮಾನವರನ್ನು ಭಿನ್ನ ರೀತಿಯಲ್ಲಿ ಯೋಚಿಸುವಂತೆ ಮಾಡಿದೆ. ದೇಶ ರಕ್ಷಣೆ ಎಂಬುದು ಕೇವಲ ಸೇನಾ ತುಕಡಿಯಿಂದ ಇರುವ ರಕ್ಷಣೆ ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚಿನದು ಎಂಬುದನ್ನು ಮನವರಿಕೆ ಮಾಡಿಕೊಟ್ಟಿದೆ. ದೇಶ ರಕ್ಷಣೆ ದೇಶದ ಗಡಿ ರಕ್ಷಣೆ ಮಾತ್ರವಲ್ಲ, ಆ ದೇಶದ ನೆಲ, ಜಲ, ಆಗಸ, ಸಂಪನ್ಮೂಲ, ಜನ ಎಲ್ಲವನ್ನೂ ಒಳಗೊಂಡಿದೆ ಎಂಬುದು ಅರಿವಾಗುತ್ತಿದೆ.

ಹಣ ಮತ್ತು ಜನ

ಎರಡನೇ ಮಹಾಯುದ್ಧದಿಂದ ಈಚೆಗೆ ಪ್ರಪಂಚದಾದ್ಯಂತ ಒಟ್ಟು ೧೭.೫ ಟ್ರಿಲಿಯನ್ ಡಾಲರ್‌ಗಳಷ್ಟು ಹಣವನ್ನು ಸೇನೆಯ ಮೇಲೆ ತೊಡಗಿಸಲಾಗಿದೆ. ವರ್ಷಕ್ಕೆ ಸುಮಾರು ೧ ಟ್ರಿಲಿಯನ್ ಡಾಲರ್‌ಗಳಷ್ಟು (ಸುಮಾರು ೧೫ ಲಕ್ಷಕೋಟಿ) ಹಣ ಸೇನೆಯ ಮೇಲೆ ಖರ್ಚು ಮಾಡಲಾಗುತ್ತಿದೆ. ಹಿಂದುಳಿದ ದೇಶಗಳು ಸ್ವಾತಂತ್ರ್ಯ ನಂತರ ಶಸ್ತ್ರಾಸ್ತ್ರಗಳ ಪಂದ್ಯಾಟದಲ್ಲಿ ಬದುಕುಳಿಯಲು ಅಪಾರ ಹಣವನ್ನು ಖರ್ಚುಮಾಡುತ್ತಿವೆ, ಸೇನೆಯ ಮೇಲಿನ ಅವುಗಳ ವೆಚ್ಚ ಮೊದಲಿಗಿಂತಲೂ ಆರು ಪಟ್ಟು ಹೆಚ್ಚು.

ಸೇನೆಯ ಉದ್ಯೋಗದಲ್ಲಿರುವ ಒಟ್ಟು ಜನರ ಸಂಖ್ಯೆ ೨೯ ಮಿಲಿಯನ್; ಇದಲ್ಲದೆ ಸೇನಾ ಆಧಾರಿತ ಪೂರಕ ಶಸ್ತ್ರಾಸ್ತ್ರ ಉತ್ಪಾದನೆಯ ಉದ್ದಿಮೆಯಲ್ಲಿ ೧೬ ಮಿಲಿಯನ್. ಅಂತರ್‌ರಾಷ್ಟ್ರೀಯ ಉದ್ಯೋಗ ಸಂಸ್ಥೆ ಇತ್ತೀಚೆಗೆ ಸೇನೆಯಲ್ಲಿರುವ ಅಥವಾ ಸೇನಾ ಸಂಬಂಧಿತ ಉದ್ಯೋಗದಲ್ಲಿರುವ ಒಟ್ಟು ಜನ ಸಂಖ್ಯೆಯನ್ನು ಲೆಕ್ಕಹಾಕಿದೆ. ಸೇನೆಯಲ್ಲಿರುವವರು, ಸೇನಾ ಅಸ್ತ್ರಗಳ ಉತ್ಪಾದನೆಯಲ್ಲಿ ತೊಡಗಿರುವವರು, ವಿಜ್ಞಾನಿಗಳು, ತಂತ್ರಜ್ಞರು, ಆಡಳಿತಾಧಿಕಾರಿಗಳು ಎಲ್ಲರೂ ಸೇರಿ ಇವರ ಸಂಖ್ಯೆ ಸುಮಾರು ೬೦ ರಿಂದ ೮೦ ಮಿಲಯನ್ ಅಷ್ಟು.

ದೇಶಗಳ ನಡುವಣ ಶಸ್ತ್ರಾಸ್ತ್ರ ಪೈಪೋಟಿ ದೇಶಗಳ ನಡುವಿನ ಪರಿಹರಿಸಲ್ಪಡದೇ ಇರುವ ಸಮಸ್ಯೆಗಳ ಸಂಕೇತವಾಗಿದೆ. ಸಮಸ್ಯೆಯ ಪರಿಹಾರದ ನೆಪದಲ್ಲಿ ಶಸ್ತ್ರಾಸ್ತ್ರ ಪೈಪೋಟಿ ತನ್ನದೇ ಆದ ವೇಗದಲ್ಲಿ ಬೆಳೆಯುತ್ತಿದೆ. ಪ್ರಪಂಚದಲ್ಲಿ ಸೇನಾ ಬಲ ಮತ್ತು ಅದರ ಪ್ರದರ್ಶನ ಎಂದಿಗಿಂತಲೂ ಹೆಚ್ಚಾಗಿದೆ. ಎಂಭತ್ತರ ದಶಕದಲ್ಲಿ ೨೨ ಯುದ್ಧಗಳು ನಡೆದಿವೆ. ೧೯೪೫ ರಿಂದ ಸುಮಾರು ೧೨೦ ಹೋರಾಟಗಳು ನಡೆದಿವೆ. ಇವುಗಳ ಸಂಖ್ಯೆ ಬಡ ದೇಶಗಳಲ್ಲೇ ಹೆಚ್ಚು. ಇದರಿಂದ ೨೦ ಮಿಲಿಯನ್ ಜನರು ಕೊಲ್ಲಲ್ಪಟ್ಟಿದ್ದಾರೆ. ಅರ್ಥಶಾಸ್ತ್ರಜ್ಞ ಕೆನೆತ್ ಬೌಲ್ಡಿಂಗ್ ಹೇಳುವಂತೆ, “ದೇಶದ ಭದ್ರತೆ ಮತ್ತು ಕ್ಷೇಮದ ದೊಡ್ಡ ಶತ್ರು ದೇಶ ರಕ್ಷಣೆ ಮತ್ತು ಅದನ್ನು ಕಾರ್ಯಗತಗೊಳಿಸುವ ಸೇನಾ ವಿಧಾನ”. ಐವತ್ತರ ದಶಕದಲ್ಲಿ ಒಟ್ಟು ಮರಣ ಪ್ರಮಾಣದಲ್ಲಿ ಯುದ್ಧ ಮತ್ತು ಯುದ್ಧ ಸಂಬಂಧಿತ ಬರ, ರೋಗ ಮತ್ತು ಹಸಿವಿನಿಂದ ಸತ್ತವರ ಪ್ರಮಾಣ ಶೇ ೫೨ರಷ್ಟು. ೮೦ ರ ದಶಕದಲ್ಲಿ ಇದರ ಪ್ರಮಾಣ ಶೇ ೮೫ ರಷ್ಟು.

ಸೇನೆ ಮತ್ತು ಅಭಿವೃದ್ಧಿ :

ಜನರ ಜೀವನ ಮಟ್ಟ ಹೆಚ್ಚಿಸಲು ದೇಶದ ಸಂಪನ್ಮೂಲವನ್ನು ಹೆಚ್ಚಾಗಿ ಅಭಿವೃದ್ಧಿ ಕೆಲಸಗಳಿಗೆ ಬಳಸಿಕೊಳ್ಳಬೇಕು. ಸೇನೆಯ ಮೇಲೆ ತೊಡಗಿಸಿದ ಒಂದೊಂದು ಕಾಸೂ ನಾಗರೀಕರಿಗೆ ಬೇಕಾದ ಹಣದಿಂದ ತೆಗೆದುಕೊಳ್ಳಲಾಗುತ್ತದೆ. ಅಂತರ್‌ರಾಷ್ಟ್ರೀಯ ಶಾಂತಿ ಸಂಸ್ಥೆಯ ರಾಬರ್ಟ ಜಾನ್‌ಸನ್ ಹೇಳುವಂತೆ,

"ಅಭಿವೃದ್ಧಿ ದೇಶಗಳಲ್ಲಿ ವಾಸಮಾಡುತ್ತಿರುವ ಶಾಂತಿಪ್ರಿಯ ಜನರ ಜೀವನ ಮಟ್ಟ ಯುದ್ಧ ಸಂತ್ರಸ್ತರಿಗಿಂತ ಭಿನ್ನವಾಗೇ ಇಲ್ಲ." ಸೇನಾ ಆಶ್ರಿತ ದೇಶಗಳಲ್ಲಿ ಸೇನಾ ಪಡೆಗಳು ದೇಶದ ಭದ್ರತೆ, ಶಾಂತಿ, ಸೌಹಾರ್ದತೆಯನ್ನು ಕಾಪಾಡುವುದರಲ್ಲಿ ವಿಫಲವಾಗಿವೆ. ಅಂತಹ ದೇಶಗಳಲ್ಲಿ ವಾಸಿಸುತ್ತಿರುವ ಜನರ ಪರಿಸ್ಥಿತಿ ಯುದ್ಧಕ್ಕೆ, ಗಲಭೆಗೆ ಈಡಾದ ಜನರಿಗಿಂತ ಬೇರೇನಿಲ್ಲ. ಪ್ರಪಂಚದಲ್ಲಿ ಸುಮಾರು ೭೭೦ ಮಿಲಿಯನ್ ಜನರು ಪೌಷ್ಟಿಕ ಆಹಾರದ ಕೊರತೆಯಿಂದ ಬಳಲುತ್ತಿದ್ದಾರೆ. ಪ್ರತಿ ವರ್ಷ ಸುಮಾರು ೧೪ ಮಿಲಿಯನ್ ಮಕ್ಕಳು ಹಸಿವು ಮತ್ತು ರೋಗರುಜಿನಗಳಿಂದ ಸಾಯುತ್ತಿವೆ. ೮೮೦ ಮಿಲಿಯನ್ ಅನಕ್ಷರಸ್ಥ ಜನರಿದ್ದಾರೆ. ೧.೩ ಮಿಲಿಯನ್ ಜನರಿಗೆ ಶುದ್ಧ ಕುಡಿಯುವ ನೀರು ಸಿಗುತ್ತಿಲ್ಲ. ಅಮೆರಿಕಾದ ಅಧ್ಯಕ್ಷರಾಗಿದ್ದ ಐಸೆನ್‌ಹೋವರ್ ೩೭ ವರ್ಷಗಳ ಹಿಂದೆಯೇ ಅಂದಿದ್ದರು, "ನಾವು ತಯಾರಿಸಿದ ಒಂದೊಂದು ಬಂದೂಕೂ, ಕಟ್ಟಿದ ಒಂದೊಂದು ಹಡಗೂ, ಉಡಾಯಿಸಿದ ಒಂದೊಂದು ಕ್ಷಿಪಣಿಯೂ ಕೊಟ್ಟ ಕೊನೆಗೆ ಪ್ರತಿಬಿಂಬಿಸುವುದು ಹಸಿವಿನಿಂದ ಮತ್ತು ಅರೆಹೊಟ್ಟೆಯಿಂದ ನರಳುತ್ತಿರುವವರಿಂದ ಕಸಿದುಕೊಂಡ ಅನ್ನವನ್ನು, ಚಳಿಯಿಂದ ನಡುಗುತ್ತಿರುವವರಿಂದ ಕದ್ದ ಹೊದಿಕೆಯನ್ನು."

ದೇಶಗಳ ನಡುವಣ ಶಸ್ತ್ರಾಸ್ತ್ರಗಳ ಪೈಪೋಟಿಯನ್ನು ಸುಖಾಂತಗೊಳಿಸಲು ಸೇನಾಲಯದಿಂದ ಉಂಟಾದ ಅಭದ್ರತೆಯನ್ನು ಹೋಗಲಾಡಿಸಿದರೆ ಮಾತ್ರ ಸಾಲದು. ಶಸ್ತ್ರಾಸ್ತ್ರ ಪೈಪೋಟಿಗೆ ಮೂಲ ಕಾರಣವಾದ ಮೂಲ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಬೇರು ಸಹಿತ ನಿರ್ಮೂಲ ಮಾಡಬೇಕು. ಒಂದು ಉತ್ತಮ, ದೂರ ದೃಷ್ಟಿಯಿಂದ ಕೂಡಿದ ರಚನಾತ್ಮಕ ಆರ್ಥಿಕ ಯೋಜನೆ ಈ ಎಲ್ಲಾ ಸಮಸ್ಯೆಗಳಿಗೆ ಉತ್ತರವಾಗಬಲ್ಲದು. ಇಂಥಹ ಯೋಜನೆ ದೇಶದ ಸಂಪನ್ಮೂಲವನ್ನೆಲ್ಲಾ ಸೇನಾ ಯೋಜನೆಗಳ ಮೇಲೆ ತೊಡಗಿಸುವ ಬದಲು ನಾಗರೀಕರ ಏಳಿಗೆಯನ್ನು ಗಮನಿಸುವ ಯೋಜನೆಗಳ ಕಡೆಗೆ ತಿರುಗಿಸಲು ಸಹಾಯವಾಗಬಹುದು.

(ಆಧಾರ : ವರ್ಲ್ಡ್‌ವಾಚ್ ೮೯)

ಧ್ಯಾನ ಮತ್ತು ಕರ್ಮ

—ವಿನೋಬಾ

ಕರ್ಮವು ಉಪಾಸನಾ ವೃತ್ತಿಯಿಂದ ಆಗಬೇಕು. ಮತ್ತು ಸಾಧನೆಯು ಕರ್ಮವಿಮುಖವಾಗಿರಕೂಡದು. ಆಧ್ಯಾತ್ಮಿಕ ಸಾಧನೆಗಾಗಿ ಇದುವರೆಗೆ ನಾವು ಧ್ಯಾನ – ಧಾರಣಾಧಿ ಮಾಡುತ್ತಾ ಬಂದಿದ್ದೇವೆ. ಆದರೆ ಅದರಲ್ಲಿ ಶರೀರ ಶ್ರಮಕ್ಕೆ ಸ್ಥಾನವಿರಲಿಲ್ಲ. ಜೈನ – ಬೌದ್ಧ – ಹಿಂದೂ ಮುಂತಾದ ಧರ್ಮಗಳು ಧ್ಯಾನ – ಧಾರಣಾದಿ ಉಪದೇಶ ಮಾಡಿದವು. ಆದರೆ ಧ್ಯಾನ ಮಾಡುವವ ಅಂಗಳದ ಸ್ವಚ್ಛತೆ ಮಾಡುವುದಿಲ್ಲ, ಉತ್ಪಾದನೆಯ ಯಾವ ಕೆಲಸವನ್ನೂ ಮಾಡುವುದಿಲ್ಲ. ಇದು ವರೆಗೂ ಇಂಥ ಕೆಲಸವು ಭಿಕ್ಷು – ಶ್ರಮಣ – ಸಾಧಕರಿಗೆ ಯೋಗ್ಯವಲ್ಲವೆಂದೇ ತಿಳಿಯಲಾಗಿತ್ತು. ಇಂದಿನ ಸಾಧಕನು ಶರೀರ ಪರಿಶ್ರಮ ಮಾಡದೇ ಹೋದಲ್ಲಿ ಪ್ರಾಚೀನ ಕಾಲದ ಕಂದಕದಲ್ಲಿ ಬಿದ್ದಂತಾಗುತ್ತದೆ. ಇಂದಿನ ಯುಗಕ್ಕೆ ಯೋಗ್ಯನಾಗುವುದಿಲ್ಲ. ಅಪರಿಗ್ರಹ ಮತ್ತು ಶರೀರ ಶ್ರಮದ ಮೇಲೆ ಆಧಾರಗೊಂಡ ಕರ್ಮಯೋಗವು ಧ್ಯಾನಯೋಗಕ್ಕೆ ಸಮಾನವಾಗುತ್ತದೆ. ಇದುವರೆಗೆ ಸಾಧನೆಯ ಬಗ್ಗೆ ನಡೆದ ವಿಚಾರ ಪರಿಪೂರ್ಣವೆಂದು ಹೇಳಲಾಗುವುದಿಲ್ಲ. ವಿಜ್ಞಾನದ ಉತ್ತರೋತ್ತರ ವಿಕಾಸ ಆಗುತ್ತಾ ಹೋಗುತ್ತದೆ. ಅದೇ ರೀತಿ ಸಾಧನೆಯ ವಿಚಾರವೂ ಕೂಡ ಉತ್ತರೋತ್ತರ ವಿಕಾಸವಾಗುತ್ತಾ ಹೋಗುವುದು.

ಹಿಂದೂಸ್ಥಾನದ ಧ್ಯಾನಮಾರ್ಗ ಬಹಳ ವಿಕಸಿಕವಾಗಿದೆ. ಇಲ್ಲಿಯ ಧ್ಯಾನ ಮಾರ್ಗದಲ್ಲಿ ಧ್ಯಾನವನ್ನು ಕರ್ಮದೊಂದಿಗೆ ವಿರೋಧವೆಂದು ಭಾವಿಸಲಾಗಿದೆ. ಧ್ಯಾನಯೋಗಿಯು ಸಾಮಾನ್ಯವಾಗಿ ಕರ್ಮಮಾಡುತ್ತಿದ್ದಿಲ್ಲ. ಏಕೆಂದರೆ ಕರ್ಮ ಮಾಡುವುದರಿಂದ ಅವನ ಧ್ಯಾನಕ್ಕೆ ಅಡ್ಡಿಯಾಗುತ್ತದೆ ಎಂದು ತಿಳಿಯಲಾಗಿತ್ತು. ಅವನಿಗೆ ಬೇರೆ ಕರ್ಮಯೋಗಿಗಳ ಸಹಾಯ ಸಿಗುತ್ತಿತ್ತು ಮತ್ತು ಇಬ್ಬರೂ ಪರಸ್ಪರ ಪೂರಕವಾಗಿದ್ದರು. ಕರ್ಮಯೋಗಿಗಳು, "ನಾನಂತೂ ಧ್ಯಾನ ಮಾಡಲು ಸಾಧ್ಯವಿಲ್ಲ. ಈ ಜನ ಮಾಡುತ್ತಾರೆ. ಆದ್ದರಿಂದ ಇವರ ಪೋಷಣೆ ಮತ್ತು ರಕ್ಷಣೆ ಮಾಡುವುದು ನಮ್ಮ ಕರ್ತವ್ಯ " ಎಂದು ಭಾವಿಸುತ್ತಿದ್ದರು. ಧ್ಯಾನ

ಯೋಗಿಗಳು, "ನಾವು ಮಾಡುವಂಥ ಸೇವೆಯನ್ನು ಯಾರೂ ಮಾಡಲಾರರು" ಎಂದು ತಿಳಿಯುತ್ತಿದ್ದರು.

ಕರ್ಮಯೋಗವು ಧ್ಯಾನದಲ್ಲಿ ಅಡ್ಡಿ ಉಂಟು ಮಾಡುತ್ತದೆ ಎಂದು ಬೆಳೆದು ಬಂದಿರುವ ವಿಚಾರದಲ್ಲಿ ಕೆಲವು ನ್ಯೂನತೆಗಳಿವೆ. ಅದರಲ್ಲಿ ಸುಧಾರಣೆಯಾಗ ಬೇಕೆಂದು ನನಗೆ ಅನಿಸಿತು. ಯಾವ ಪ್ರಕಾರ ಕರ್ಮ ಬಿಟ್ಟು ಸಮಾಧಿ ಲಬ್ಧ ವಾಗುತ್ತದೋ ಅದೇ ಪ್ರಕಾರದ ಸಮಾಧಿ ಕರ್ಮ ಮಾಡುತ್ತಾ ಮಾಡುತ್ತಾ ಲಬ್ಧವಾಗಬೇಕು. ಇದರ ಸ್ವಲ್ಪ ಅನುಭವ ಕೂಡ ನನಗೆ ಆಗಿದೆ. ಇದುವರೆಗೆ ಧ್ಯಾನಕ್ಕಾಗಿ ಒಂದು ಸ್ಥಾನದಲ್ಲಿ ಕುಳಿತುಕೊಳ್ಳಬೇಕು ಮತ್ತು ಅನೇಕ ಕ್ರಿಯೆಗಳನ್ನು ತ್ಯಾಗ ಮಾಡುವುದು ಅಗತ್ಯ ಎಂದು ಭಾವಿಸಲಾಗಿತ್ತು. ಮೊದಲ ಹಂತದಲ್ಲಿ ಅದರ ಅಗತ್ಯತೆ ಇರಬಹುದು. ಆದರೆ ಧ್ಯಾನ ಪ್ರಕ್ರಿಯೆಯ ಉತ್ಕರ್ಷ ಅದರಿಂದ ಆಗುವುದಿಲ್ಲ. ಅಖಂಡವಾಗಿ ಕ್ರಿಯೆ ನಡೆಯುತ್ತಿದ್ದೆ, ಪರಂತು ಅದರ ಕ್ರಿಯಾನ್ವತೆಯ ಅರಿವೇ ಆಗುತ್ತಿಲ್ಲ ಎಂಬುದರಲ್ಲಿ ಉತ್ಕರ್ಷವಿದೆ. ಯಾವ ರೀತಿ ನಮ್ಮ ಉಸಿರಾಟ ನಡೆಯುತ್ತಿದೆಯೋ ಹಾಗೆ. ಆ ಕ್ರಿಯೆಯಿಂದ ನಮಗೆ ಯಾವ ಕ್ರಿಯೆಯೂ ಅನಿಸುವುದಿಲ್ಲ. ಬದಲಿಗೆ ಅದು ಸಮತ್ವಯುಕ್ತವಾಗಿ ನಡೆದರೆ ಅದರಿಂದ ಹೆಚ್ಚಿನ ನೆರವೇ ದೊರೆಯುತ್ತದೆ. ಅದೇ ರೀತಿ ಭೂತದಾಯಾತ್ಮಕ ಶರೀರ ಶ್ರಮದ ಶೋಷಣ ರಹಿತ ಉತ್ಪಾದನೆಯ ಕೆಲಸವು ಶಾಂತ, ಸೌಮ್ಯ ಎಲ್ಲರಿಗೂ ಅವಿರೋಧಿಯಾದ ಕ್ರಿಯೆಯ ಧ್ಯಾನದೊಂದಿಗೆ ನಡೆಯಲು ಸಾಧ್ಯವಿದೆ. ಆದ್ದರಿಂದ ಧ್ಯಾನದಲ್ಲಿ ಯಾವುದೇ ಅಪೂರ್ಣತೆ ಉಂಟಾಗುವುದಿಲ್ಲ.

ನೇತಿ, ಧೌತಿ, ಭಸ್ತಿ ಇತ್ಯಾದಿ ಪಂಚಕರ್ಮ ಮಾಡುವುದರಿಂದಲೇ ಆಧ್ಯಾತ್ಮ ವಾಗುವುದಿಲ್ಲ. ಈ ವಿಷಯಗಳು ಶರೀರ ಸ್ವಚ್ಛತೆಗಾಗಿ ಸಹಾಯಕವಾಗಿವೆ. ಆದರೆ ಆಧ್ಯಾತ್ಮಿಕ ವಿದ್ಯೆಗಾಗಿ ಯಾವುದಾದರೂ ಅತ್ಯಂತ ಹೆಚ್ಚು ಅನುಕೂಲ ಮತ್ತು ಹತ್ತಿರವಾದ ವಿಷಯವಿದ್ದರೆ ಅದು ಉತ್ಪಾದಕ ಶರೀರ ಶ್ರಮವೆಂದು ನಾನು ನನ್ನ ಅನುಭವದಿಂದ ಘೋಷಿಸ ಬಯಸುತ್ತೇನೆ. ಮನುಷ್ಯನಿಗೆ ಹಸಿವಾಗುತ್ತದೆ. ಆ ಹಸಿವು ಪರಮೇಶ್ವರನ ಪ್ರೇರಣೆ. ಅದರಿಂದ ನಾವು ಆಧ್ಯಾತ್ಮದಲ್ಲಿ ಯಾವ ದಿಕ್ಕಿನತ್ತ ಹೋಗಬೇಕೆಂದು ಅದು ಹೇಳುತ್ತದೆ.

ನಾವು ನಮ್ಮದೆಲ್ಲವನ್ನೂ ಸಮಾಜಕ್ಕೆ ಕೊಡುತ್ತೇವೆ. ಶಕ್ತಿಯನ್ನೂ ಕೂಡ ಅದರ ಸೇವೆಯಲ್ಲಿಯೇ ತೊಡಗಿಸುತ್ತೇವೆ. ಉತ್ಪಾದಕ ಶ್ರಮ ಮಾಡತ್ತೇವೆ. ಆಗ ಆ ಹಸಿವೆಯೊಂದಿಗೆ ಬಂದಂಥ ಪಾಪವೆಲ್ಲವೂ ಮುಕ್ತಾಯವಾಗುತ್ತದೆ. ಮನುಷ್ಯ ಹಸಿವೆಯಿಂದ ಬಳಲಿ ಊಟ ಮಾಡಿದಾಗ ಆ ಊಟದೊಂದಿಗೆ ಅನೇಕ ಪಾಪಗಳು ಸೇರಿರುತ್ತವೆ. ಆ ಎಲ್ಲ ಪಾಪಗಳಿಂದ ಮುಕ್ತವಾಗುವುದಕ್ಕೆ ಸುಲಭವಾದ ಉಪಾಯ ವೆಂದರೆ ನಾವು ನಮ್ಮ ಕೈಯಿಂದ ಪರಿಶ್ರಮ ಮಾಡಿ ಅನ್ನ ಉತ್ಪಾದಿಸುವುದು. 'ಅನ್ನಂ

ಬ್ರಹ್ಮೇತಿ'–ಶಾಸ್ತ್ರಕಾರರು ಹೇಳಿದ್ದಾರೆ. ಉತ್ಪಾದನೆಯ-ಪರಿಶ್ರಮ ಮಾಡುವುದರಿಂದ ಪೃಥ್ವಿ, ಆಕಾಶ, ಅಗ್ನಿ, ಸೂರ್ಯ, ವನಸ್ಪತಿ, ನೀರು, ಪರ್ವತ ಮುಂತಾದ ದೇವತೆಗಳೇನಿವೆ ಅವೆಲ್ಲದರೊಂದಿಗೆ ಸಂಪರ್ಕ ಉಂಟಾಗುತ್ತದೆ. ಅವರೆಲ್ಲರ ಸೇವೆ ಮಾಡುತ್ತೇವೆ ಮತ್ತು ಸೇವೆಯ ಫಲಸ್ವರೂಪವಾಗಿ ದೊರೆತದ್ದನ್ನು ಸಮಾಜಕ್ಕೆ ಅರ್ಪಿಸಿ ಸಮಾಜದಿಂದ ಪ್ರಸಾದ ರೂಪವಾಗಿ ಗ್ರಹಣ ಮಾಡುತ್ತೇವೆ, ಈ ಪ್ರಕ್ರಿಯೆ ಆಧ್ಯಾತ್ಮಕಕ್ಕಾಗಿ ಸಾಧಕವಾಗಿದೆ. ಇಷ್ಟರಿಂದಲೇ ಆಧ್ಯಾತ್ಮವಾಗುತ್ತದೆ ಎಂದೇನೂ ಅಲ್ಲ. ಆದರೆ ಆಸನ–ಪ್ರಾಣಾಯಾಮಕ್ಕಿಂತ ಈ ಪ್ರಕ್ರಿಯೆ ಆಧ್ಯಾತ್ಮಕಕ್ಕಾಗಿ ಹೆಚ್ಚು ಸಹಾಯಕವಾಗಿದೆ.

ಯುವಕರು ಶ್ರಮ ಮಾಡಬಲ್ಲರು. ಸಮಾಜದ ಮೇಲೆ ಭಾರವಾಗಬಾರದು. ಶರೀರ ಪರಿಶ್ರಮಾತ್ಮಕ ಕೆಲಸ ಮಾಡಬೇಕು. ಹೊರಗಿನಿಂದ ನೋಡಿದರೆ ಶಾರೀರಿಕ ಶ್ರಮದ ಕೆಲಸಗಳ ಕಾರಣದಿಂದ ಸಮಾಜದ ಮೇಲೆ ಭಾರ ಬೀಳುವುದಿಲ್ಲ ಮತ್ತು ಆ ಕೆಲಸಗಳ ಮೂಲಕ ಒಳಗೆ ಒಂದು ಆಲಂಬನೆ ಅಥವ ಆಸರೆ ದೊರೆಯುತ್ತದೆ. ಕೆಲಸವನ್ನು ಧ್ಯಾನ–ಪೂರ್ವಕವಾಗಿ ಮಾಡಿದಾಗ ಸಹಜವಾಗಿ ಬಾಹ್ಯ ದೃಷ್ಟಿಯಿಂದ ಕರ್ಮಯೋಗ ಮತ್ತು ಆಂತರಿಕ ದೃಷ್ಟಿಯಿಂದ ಧ್ಯಾನಯೋಗ ಸಾಧ್ಯವಾಗುವುದು.

(ಮುಂದುವರಿಯುವುದು)

೬ ನೇ ಪುಟದಿಂದ.........ಅಮೆರಿಕೆಯಿಂದ ಒಂದು ಪತ್ರ

ಕಳೆದ ಕೆಲ ತಿಂಗಳುಗಳಿಂದ ನಾನು ಗೀತೆ, ಕಾಮು ವಾಲ್ಟೇರ್‌ರನ್ನು ಮತ್ತೆ ಮತ್ತೆ ಓದಿದ್ದೇನೆ. ನನ್ನ ಥೀಸಿಸ್ ಮೇಲೆ ಕೆಲಸ ಮುಂದುವರಿಸಲು ಪ್ರಯತ್ನಿಸಿದ್ದೇನೆ. ಇಲ್ಲಿ ದುಡಿಯೋ ಉಳಿದವರನ್ನು ನೋಡಿದರೆ ಆಶ್ಚರ್ಯ ಅನಿಸುತ್ತೆ. ಸದಾ ಏನನ್ನೊ ' ಸಾಧಿಸೋ ' ದರಲ್ಲಿ ಅವರು ಮುಳುಗಿದ್ದಾರೆ. ನಾನೊಬ್ಬ ಕೆಲಸಕ್ಕೆ ಬಾರದೋನು, ಏನು ಮಾಡೋದು ಅಂತ ಗೊತ್ತಿಲ್ಲದೇ ಇರುವ ಬಾಯಿ ಬಡುಕ ಎಂದು ನನ್ನ ಬಗ್ಗೆ ಅವರಿಗೆ ಅನ್ನಿಸಿರಲೂಬಹುದು.

ನಾನು ಇಲಿನಾಯ್ಸ್ ಯೂನಿವರ್ಸಿಟಿ ಸೇರುತ್ತಿದ್ದೇನೆ. ಸ್ಟಾನ್ ಫರ್ಡ್‌ನಲ್ಲಿ ನನಗೆ ಪ್ರವೇಶ ಸಿಗಲಿಲ್ಲ. ಉಳಿದವು ನನ್ನ ಸೇರಿಸಿಕೊಂಡರೂ ಸ್ಕಾಲರ್‌ಶಿಪ್ ನೀಡಲಿಲ್ಲ. ಹೇಗಿದ್ದರೂ, ನನ್ನ ಸಂಶೋಧನಾ ವಿಷಯಕ್ಕೆ ಇಲಿನಾಯ್ಸೇ ಒಳ್ಳೆಯ ಕೇಂದ್ರ. ನನಗೆ ಆ ಬಗ್ಗೆ ಸಂತೋಷ ಇದೆ. ಪ್ರಾಯಶಃ ನಾನು ಸರಿಯಾದ ದಾರಿಯಲ್ಲಿ ನಡೀಬೇಕು ಅಷ್ಟೇ. ಈ ಸರಿಯಾದ ದಾರಿ ಎಂದರೇನು ? ನನಗೆ ಕಿಂಚಿತ್ತೂ ಕಲ್ಪನೆ ಇಲ್ಲ. ನೀವೇನು ಭಾವಿಸುತ್ತೀರಿ? ನಾನು ಹೇಳಿರೋದೆಲ್ಲ ಸಿನಿಕ ಎನಿಸುತ್ತಾ? ಪೂರ್ವಗ್ರಹದ ಹೇಳಿಕೆ ಅನಿಸುತ್ತಾ? ನಮ್ಮ ನಮ್ಮ ಸಮಸ್ಯೆಗಳಿಗೆ ಪ್ರಪಂಚವನ್ನು ದೂರೋದು ಇದ್ದೇ ಇದೆ. ಆದ್ದರಿಂದಲೇ, ಸತ್ಯಕ್ಕೆ ನನ್ನ ಸ್ವಾರ್ಥ ಹತಾಶೆಗಳ ಬಣ್ಣ ಬಳಿದಿದ್ದೇನಾ? ★

ನಮಗೆ ಬೇಕಾಗಿರುವ ಅರ್ಥ ವ್ಯವಸ್ಥೆ

— ಪ್ರಭಾಕರ್ ಶಿಶಿಲ

ನಮ್ಮದು ಮಿಶ್ರ ಅರ್ಥವ್ಯವಸ್ಥೆ. ಇಲ್ಲಿ ಸಾರ್ವಜನಿಕ ರಂಗದಷ್ಟೇ ಪ್ರಾಮುಖ್ಯ ಖಾಸಗಿ ರಂಗಕ್ಕಿದೆ. ನೆಹರೂರ ಕೊಡುಗೆಯಾದ ಮಿಶ್ರ ಅರ್ಥವ್ಯವಸ್ಥೆಗೆ ಪ್ರೇರಣೆ ಅವರದೇ ಆದ ಸಮಾಜವಾದೀಯ ದೃಷ್ಟಿಕೋನ.

೧೯೨೯ ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷ ಸ್ಥಾನದಿಂದ ಮಾಡಿದ ತಮ್ಮ ಚರಿತ್ರಾರ್ಹ ಭಾಷಣದಲ್ಲಿ ನೆಹರೂ ಒತ್ತು ನೀಡಿದ್ದು ಸಮಾನತೆಗೆ. ಸಮಾನತೆ ಸಾಧಿಸಲು ಸಮಾಜವಾದವೊಂದೇ ಹಾದಿ ಎಂದವರು ನಂಬಿದ್ದರು ಕೂಡಾ. ೧೯೫೬ ರಲ್ಲಿ ರಶಿಯಾಕ್ಕೆ ಭೇಟಿ ನೀಡಿದಾಗ ಅನುಭವವಾದ ಅದರ ಎರಡು ಯೋಜನೆಗಳ ಫಲವಾದ ಬೃಹತ್ ಕೈಗಾರೀಕರಣ ನೆಹರೂ ಸಮಾಜವಾದಕ್ಕೆ ಸ್ಪಷ್ಟ ರೂಪವನ್ನು ನೀಡಿತು.

ನೆಹರೂ ತಮ್ಮ ಸಮಾಜವಾದದ ಬಗ್ಗೆ ಹೀಗೆಂದಿದ್ದಾರೆ : ಹಳ್ಳಿಗರ ಅಭ್ಯುದಯವನ್ನು ಹೆಚ್ಚಿಸುವುದೆಲ್ಲವನ್ನೂ ನಾನು ಅರ್ಥವ್ಯವಸ್ಥೆಗೆ ಕೊಡಿಸುತ್ತೇನೆ. ಗ್ರಾಮೀಣ ಉದ್ಯಮಗಳ ಜತೆಗೆ ವಿದ್ಯುಚ್ಛಕ್ತಿ, ಹಡಗು ನಿರ್ಮಾಣ, ಕಬ್ಬಿಣದ ಉತ್ಪಾದನೆ, ಯಂತ್ರ ನಿರ್ಮಾಣಗಳೆಲ್ಲವನ್ನೂ ನಾನು ಕಲ್ಪಿಸಿಕೊಳ್ಳುತ್ತೇನೆ. ಪ್ರಜಾಪ್ರಭುತ್ವದ ಔಪಚಾರಿಕ ಸಮಾನತೆಯನ್ನು ಸಮಾಜವಾದದ ವಾಸ್ತವಿಕ ಸಮಾನತೆಯನ್ನಾಗಿ ಬದಲಾಯಿಸುವುದರ ಪ್ರತಿಪಾದನೆಯೇ ಪ್ರಜಾಸತ್ತಾತ್ಮಕ ಸಮಾಜವಾದದ ಸಂಕಲ್ಪವಾಗಿದೆ."

ನಮ್ಮ ಕೈಗಾರಿಕಾ ನೀತಿ ಮತ್ತು ಪಂಚವಾರ್ಷಿಕ ಯೋಜನೆಗಳಿಗೆ ತಳಪಾಯದ ಮಿಶ್ರ ಅರ್ಥ ನೀತಿಯ ಬಗೆಗಿನ ಅಂದಿನ ಸಮರ್ಥನೆ ರಮ್ಯವಾಗಿದೆ. ರಶಿಯಾದ ಯೋಜನೆಗಳನ್ನು ಆಧಾರವಾಗಿರಿಸಿದ ಮಹಲನೋಬಿಸ್ ಮಾದರಿ ಭಾರತವನ್ನು ಕೈಗಾರಿಕಾ ರಂಗದಲ್ಲಿ ಸಾಕಷ್ಟು ಮುನ್ನಡೆಸಿದ್ದು ನಿಜ. ಆದರೆ ಬಡತನದ ರೇಖೆ

ಯಿಂದ ಕೆಳಗಿರುವ ೨೩೧ ದಶಲಕ್ಷ ಮಂದಿಗಳ ಸ್ಥಿತಿ ಬೇರೆಯೇ ಕಥೆಯನ್ನು ಹೇಳುತ್ತದೆ. ೧೩೫ ದಶಲಕ್ಷ ಮಂದಿ ನಿರುದ್ಯೋಗಿಗಳದ್ದು ಮತ್ತೊಂದು ವ್ಯಥೆ.

ಏಕೆ ಹೀಗೆ? ನಲ್ವತ್ತು ವರ್ಷಗಳ ಯೋಜನೆಯಲ್ಲಿ ನಾವು ಸೋತುದೆಲ್ಲಿ? ಈ ಪ್ರಶ್ನೆಗಳಿಗೆ ಉತ್ತರ ಸಿಗಲು ನಾವು ನಮ್ಮ ಯೋಜನೆಗಳತ್ತ ಇಣುಕುನೋಟ ಹರಿಸಬೇಕಾಗುತ್ತದೆ.

ನಮ್ಮ ಏಳು ಯೋಜನೆಗಳ ಪೈಕಿ ಪೂರ್ಣ ಯಶಸ್ಸು ಕಂಡದ್ದು ಮೊದಲನೆಯದು (೧೯೫೦–೫೧) ಮಾತ್ರ. ಕಾರಣಗಳು ಮುಖ್ಯವಾಗಿ ಸಾಕಷ್ಟು ಮಳೆ ಬಂದುದು ಮತ್ತು ಸಣ್ಣ ಗುರಿ ಸಾಧನೆಯ ಧ್ಯೇಯ ಇರಿಸಿಕೊಂಡದ್ದು. ಸಾರ್ವಜನಿಕ ರಂಗದಲ್ಲಿ ಮಾಡಿದ ವೆಚ್ಚ ರೂ ೧೯೬೦ ಕೋಟಿ ಮಾತ್ರ. ಇದೀಗ ಮುಗಿದಿರುವ ಏಳನೆಯ ಯೋಜನೆಯಲ್ಲಿ (೧೯೮೫–೯೦) ಸಾರ್ವಜನಿಕ ರಂಗದಲ್ಲಿ ರೂ. ೧,೮೬,೦೦೦ ಕೋಟಿ ವ್ಯಯಿಸಲಾಗಿದೆ. ಮೊದಲನೆಯ ಯೋಜನೆಗಿಂತ ಇದು ೯೦ ಪಟ್ಟು ಅಧಿಕ! ೧೯೯೦–೯೫ ರ ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಾರ್ವಜನಿಕ ರಂಗದಲ್ಲಿ ಸುಮಾರು ರೂ ೬೫೦೦೦೦ ಕೋಟಿ ವ್ಯಯವಾಗಲಿದೆ. ಇದು ಏಳನೆಯ ಯೋಜನೆಗಿಂತ ಸುಮಾರು ಮೂವತ್ತು ಪಟ್ಟು ಅಧಿಕ!

ಅಗಾಧ ಮೊತ್ತ ಮತ್ತು ಮಿತಿಮೀರಿದ ಗುರಿ ನಿಗದಿ ನಮ್ಮ ಎದುರಿಸುವ ಸಮಸ್ಯೆಗಳು. ಇಷ್ಟೊಂದು ಬೃಹತ್ ಮೊತ್ತದ ಬಂಡವಾಳ ಹೂಡಿಕೆಯಾಗುವಾಗ ನಿರ್ವಹಣೆ ಸರಿ ಇಲ್ಲದಿದ್ದರೆ ಮೊತ್ತವೇ ದೊಡ್ಡ ಸಮಸ್ಯೆಯಾಗುತ್ತದೆ. ನಮ್ಮಲ್ಲಿ ಕೋಟಿಗಟ್ಟಲೆ ಹಣವೇನೋ ವ್ಯಯವಾಗುತ್ತದೆ. ಆದರೆ ಯಾವುದರ ಗುಣಮಟ್ಟವೂ ವೃದ್ಧಿಯಾಗುವುದಿಲ್ಲ. ಉದಾ : ರಸ್ತೆ, ಸಾರಿಗೆ–ಸಂಪರ್ಕ ವ್ಯವಸ್ಥೆ, ವಿದ್ಯುಚ್ಛಕ್ತಿ ಇತ್ಯಾದಿ. ಪ್ರಗತಿಯಾಗಿದೆಯೆಂದು ಅಂಕಿ ಅಂಶಗಳು ಸಾರುತ್ತವೆ. ಬೃಹತ್ ರಾಷ್ಟ್ರಗಳ ತಾಳಕ್ಕೆ ಸರಿಯಾಗಿ ಕುಣಿದಾಗಲೆಲ್ಲ ವಿಶ್ವಬ್ಯಾಂಕು ನಮ್ಮ ಸಾಧನೆಯನ್ನು ಹೊಗಳಿ ಹಾಡುತ್ತದೆ. ಆದರೆ ನಿರುದ್ಯೋಗ ಮತ್ತು ಬಡತನ ನಿವಾರಣೆಯಾಗುವುದಿಲ್ಲ. ನಮ್ಮ ಜೀವನದ ಸವಲತ್ತುಗಳು ಕಡಿಮೆಯಾಗುತ್ತಾ ಹೋಗುತ್ತವೆ.

ಕೇಂದ್ರೀಯ ನಿರ್ದೇಶನ ಮತ್ತು ಯೋಜನೆ ಇದಕ್ಕೆ ಕಾರಣ. ಸಮಾನ ಅವಕಾಶ ಇರಬೇಕಾಗಿದ್ದಲ್ಲಿ ಸಾರ್ವಜನಿಕ ರಂಗಕ್ಕೆ ಅಧಿಕ ಮತ್ತು ಖಾಸಗಿ ರಂಗಕ್ಕೆ ಕಡಿಮೆ ಮಹತ್ವ ನೀಡಲಾಗಿದೆ. ಸುಮಾರು ರೂ. ೩ ಲಕ್ಷ ಕೋಟಿಗಳ ಸ್ಥಿರಾಸ್ತಿ ಬಂಡವಾಳ ಹೊಂದಿರುವ ಸಾರ್ವಜನಿಕ ರಂಗದ ಉದ್ದಿಮೆಗಳ ವಾರ್ಷಿಕ ಲಾಭ ದರ ಕೇವಲ ಶೇ ೨೦೫ ಮಾತ್ರ! ಸಾರ್ವಜನಿಕ ರಂಗ ಎಷ್ಟು ಅದಕ್ಷ ಮತ್ತು ಭ್ರಷ್ಟ ಎನ್ನುವುದಕ್ಕೆ ಇದು ಸಾಕ್ಷಿ. ಇದೇ ಹಣ ಬ್ಯಾಂಕಲ್ಲಿರಿಸಿದರೂ ಶೇ ೧೧ ಬಡ್ಡಿಯ ದರ ಲಭ್ಯವಾಗುತ್ತಿತ್ತು! ಈ ಭಾಗ್ಯಕ್ಕೆ ನಮಗೆ ಇಂತಹ ಉದ್ದಿಮೆಗಳು ಬೇಕೆ?

ಹಾಗಿಂತ ಪರಸ್ಪರಕಾದ ಈ ಯುಗದಲ್ಲೂ ಭಾರತದಲ್ಲಿ ಲಾಭದಾಯಕವಾದ

ಖಾಸಗೀಕರಣದ ಬಗ್ಗೆ ಮುಕ್ತವಾಗಿ ಚಿಂತಿಸುವ ಜಾಯಮಾನ ಬೆಳೆದೇ ಇಲ್ಲ. ಕರ್ನಾಟಕದ ಬಸ್ಸು ಸಾರಿಗೆ ವ್ಯವಸ್ಥೆಯು ಉದಾಹರಣೆಯೇ ಸಾಕು. ಒಮ್ಮೆಲೇ ಶೇ. ೩೦ ರಷ್ಟು ಸಾರಿಗೆ ದರ ಏರಿಸಿಯೂ ಸಂಸ್ಥೆಗೆ ನಷ್ಟ ಎಂದರೆ ಗೊತ್ತಾಗುತ್ತ ದಲ್ಲಾ ನಮ್ಮ ಸಮಾಜವಾದ ಹಳಿತಪ್ಪಿದ್ದು!

ತುಂಬ ಬುದ್ಧಿವಂತನಾದ ಓರ್ವ ಗ್ರಾಮೀಣ ಪ್ರತಿಭೆಯನ್ನು ನಾನು ಬಲ್ಲೆ. ಈ ಮನುಷ್ಯ ಖಾಸಗಿಯಾಗಿ ವಿದ್ಯುತ್ತು ಉತ್ಪಾದಿಸುವ ಒಂದು ಯೋಜನೆ ತಯಾ ರಿಸಿ ಸರಕಾರದ ಮುಂಗಡ ಬಯಸಿದರು. ಜನರಿಂದ ಆರಿಸಲ್ಪಟ್ಟ 'ಪ್ರತಿನಿಧಿ' ಇಂತಿಷ್ಟು ಕೊಟ್ಟರೆ ಆ ಯೋಜನೆ ಸರಕಾರದ ಮಂಜೂರಾತಿ ದೊರಕಿಸುವುದಾಗಿ ಆಶ್ವಾಸನೆ ನೀಡಿದರು. ಅಷ್ಟು ಕೊಡಲು ಈ ಮನುಷ್ಯನಲ್ಲಿಲ್ಲ. ಯೋಜನೆ ಮೂಲೆಪಾಲಾಯಿತು.

ಇಂತಹ ನಿಜಸಂಗತಿ ಅಲ್ಲಲ್ಲಿ ನಮಗೆ ಕಾಣಸಿಗುತ್ತವೆ. ಕರ್ನಾಟಕದಲ್ಲಿ ವಿದ್ಯುತ್ತು ಅಭಾವ ಇರುವುದು ಎಲ್ಲರಿಗೂ ಗೊತ್ತು. ಬೃಹತ್ಪ್ರಮಾಣದ ಅಣೆಕಟ್ಟು ಕಟ್ಟಿ, ಕಾಡು ಮುಳುಗಿಸಿ ಮಳೆ ಬರಲಿಲ್ಲವೆಂದು ಮೇಲೆ ನೋಡುವ ಮಂದಿಗಳು ನಮ್ಮ ಯೋಜನಾತಜ್ಞರು! ಸಣ್ಣ ಸಣ್ಣ ಘಟಕಗಳ ಮೂಲಕ ಖಾಸಗಿಯಾಗಿ ವಿದ್ಯುತ್ ಉತ್ಪಾದಿಸುವುದು ಈ ಸಮಸ್ಯೆಗೆ ಪರಿಹಾರ. ಹಾಗಂತ ಖಾಸಗಿಯವರಿಗೆ ನೀಡಿದರೆ ನಮ್ಮ ರಾಜಕಾರಣಿಗಳು, ಸರಕಾರಿ ತಜ್ಞರು, ಇಂಜಿನಿಯರುಗಳು ಮತ್ತು ಕಂಟ್ರಾಕ್ಟರ್‌ಗಳು ಬದುಕುವುದು ಹೇಗೆ?

ಕರಾವಳಿಯಲ್ಲಿ ಸಮುದ್ರ ಕೊರೆತದ ಬಗ್ಗೆ ನಾವೆಲ್ಲಾ ಓದಿರುತ್ತೇವೆ. ಸಮುದ್ರ ಕೊರೆತ ತಡೆಗಟ್ಟಲು ಸರಕಾರ ತಡೆಗೋಡೆ ನಿರ್ಮಾಣಕ್ಕೆ ಕೋಟಿಗಟ್ಟಲೆ ರೂಪಾಯಿ ಗಳ ದೊಡ್ಡ ಯೋಜನೆಯೊಂದನ್ನು ರೂಪಿಸಿದೆ. ಇತ್ತೀಚಿಗೆ ವಿಶ್ವವಿದ್ಯಾನಿಲಯದ ಸಾಗರ ವಿಜ್ಞಾನದ ಪ್ರೊಫೆಸರರೊಬ್ಬರು ಸಮುದ್ರ ಕೊರೆತದ ಬಗ್ಗೆ ವಿಶ್ಲೇಷಣಾತ್ಮಕ ಅಧ್ಯಯನ ನಡೆಸಿ "ಅದೊಂದು ಸಹಜ ಕ್ರಿಯೆ. ಐವತ್ತು ವರ್ಷಗಳಲ್ಲಿ ಒಂದಷ್ಟು ನೆಲ ಸಮುದ್ರದ ಹೊಟ್ಟೆ ಸೇರುತ್ತದೆ. ಅದಕ್ಕೆ ತಡೆಗೋಡೆ ಕಟ್ಟಿದರೆ ಸಮುದ್ರ ಮತ್ತೊಂದೆಡೆ ಕೊರೆಯುತ್ತದೆ. ಭೀಕರ ಅನಾಹುತ ಮಾಡುತ್ತದೆ. ಅದನ್ನು ಹಾಗೇ ಬಿಟ್ಟುಬಿಟ್ಟರೆ ಆಗುವ ಅನಾಹುತ ತಡೆಗೋಡೆ ನಿರ್ಮಾಣ ಮಾಡಿದರೆ ಆಗು ವುದಕ್ಕಿಂತ ಎಷ್ಟೋ ಕಡಿಮೆ" ಎಂದು ಸಾಧಿಸಿದರು. ಈ ಲೇಖನ ಯೋಜನಾ ತಜ್ಞರಿಗೆ, ಪ್ರಭುತ್ವಕ್ಕೆ ಮತ್ತು ಕಂಟ್ರಾಕ್ಟರರುಗಳಿಗೆ ಒಡಿಸಲಿಲ್ಲ. ಈಗ ಪ್ರೊಫೆಸರ ರಿಗೆ ಲೇಖನ ಬರೆದುದಕ್ಕೆ ಸಮಜಾಯಿಸಿ ನೀಡುವಂತೆ ಕೇಳಲಾಗಿದೆ!

ತೇಹರಿ ಮತ್ತು ನರ್ಮದಾ ಅಣೆಕಟ್ಟುಗಳಿಗೆ ವ್ಯಾಪಕ ವಿರೋಧ ಬಂದದ್ದು ನೀವೆಲ್ಲಾ ತಿಳಿದಿದ್ದೀರಿ. ನರ್ಮದಾ ಅಣೆಕಟ್ಟು ಬೇಡ ಎಂದು ಪ್ರತಿಭಟಿಸಿದವರಿ ಗಿಂತ ಬೇಕೆಂದು ಹೇಳುವವರು ಅಧಿಕ! ಈ ಜನ ಯಾರೆಂದು ಗೊತ್ತಲ್ಲಾ? ಅದೇ ಭಾಷಣ ರ್‍ಯಾಲಿಗಳಲ್ಲಿ ಭಾಗವಹಿಸಲು ಲಾರಿಗಳಲ್ಲಿ ದಿನಕ್ಕೆ ರೂ ೨೦ ಕೊಟ್ಟರೆ ಬರುವ

ಜನ! 'ಅಣೆಕಟ್ಟು' ಒಂದರ ಹಿಂದಿರುವ ಸ್ಥಾಪಿತಹಿತಗಳು ಏನನ್ನೂ ಮಾಡಿಯಾವು.?

ನಲ್ವತ್ತು ವರ್ಷಗಳ ಯೋಜನೆಯಲ್ಲಿ ರಾಷ್ಟ್ರದ ಬಗ್ಗೆ ನಿಜವಾದ ಕಾಳಜಿ ಇರುವವರಿಗೆ ಅರ್ಥವಾದದ್ದು ಇಷ್ಟು:-

೧. ನಮ್ಮ ದೇಶಕ್ಕೆ ಕೇಂದ್ರೀಕೃತ ಯೋಜನೆಗಳು ಒಗ್ಗುವುದಿಲ್ಲ.
೨. ಬೃಹತ್ ಬಂಡವಾಳ ಹೂಡಿಕೆಯ ಯೋಜನೆಗಳು ಕೂಡ ನಮಗೆ ಇನ್ನೂ ಹೇಳಿಸಿದ್ದಲ್ಲ.
೩. ಬೃಹತ್ ಅಣೆಕಟ್ಟು, ಅಣುಸ್ಥಾವರಗಳು ನಮಗೆ ಬೇಡ.
೪. ನಮ್ಮ ಯೋಜನೆಗಳು ರೂಪುಗೊಳ್ಳುತ್ತಿರುವುದು ರಾಜಕೀಯ ಉದ್ದೇಶಗಳಿಂದ; ಕೇವಲ ಕೆಲವು ಮಂದಿಗಳ ಆರ್ಥಿಕ ಲಾಭಕ್ಕಾಗಿ ಮಾತ್ರ.

ಒಟ್ಟಿನಲ್ಲಿ ನೆಹರೂರ ಸಮಾಜವಾದದ ಅಡಿಪಾಯವಾದ ಮಿಶ್ರ ಅರ್ಥ ವ್ಯವಸ್ಥೆ ನಮ್ಮಲ್ಲಿ ಸೋತಿದೆ. ಸರಕಾರಿ ಅಂಕಿ ಅಂಶಗಳು ಈ ಸೋಲನ್ನು ಮರೆ ಮಾಡುತ್ತವೆ. ನಮ್ಮ ಸಾಧನೆಗೆ ಅಂಕಿ ಅಂಶಗಳನ್ನು ನೋಡುವುದೇ ಬೇಡ. ನಮ್ಮ ದೇಶದ ಮುಖ್ಯವಾಗಿ ಹಳ್ಳಿಗಳ ಜನಜೀವನದ ಅಧಃಪತನ, ವಿನಾಶಗೊಂಡ ಸಾಂಸ್ಕೃತಿಕ ಮೌಲ್ಯಗಳು, ಎಲ್ಲದಕ್ಕೂ ನಗರಗಳನ್ನು ಅವಲಂಬಿಸಬೇಕಾಗಿರುವ ದುಸ್ಥಿತಿ, ದಾರಿದ್ರ್ಯ, ನಿರುದ್ಯೋಗ, ಅನಕ್ಷರತೆ ನಮ್ಮ ಸೋಲಿಗೆ ಕನ್ನಡಿ ಹಿಡಿಯುತ್ತವೆ.

ಹಾಗಾದರೆ ಆಗಬೇಕಾದುದೇನು? ಬೆಳವಣಿಗೆ ಮತ್ತು ಪ್ರಗತಿಯ ಬಯಕೆ ಮೇಲಿನಿಂದ ಹೇರಲ್ಪಡಬಾರದು. ಅದು ಜನರಲ್ಲೇ ಕಾಣಿಸಿಕೊಳ್ಳಬೇಕು. ಜನರಿಗೆ ಯಾವ ರೀತಿಯ ಬದುಕು ಬೇಕೋ ಅದನ್ನು ಕೊಡಲು ಸಾಧ್ಯವಾಗದಿರುವುದು ಕೇಂದ್ರೀಕೃತ ಯೋಜನೆಗಳಿಂದಾಗಿ ಎನ್ನುವುದು ನಿರ್ವಿವಾದ. ಅದಕ್ಕೆ ಯೋಜನೆಗಳ ವಿಕೇಂದ್ರೀಕರಣವಾಗಬೇಕು. ಗ್ರಾಮ ಮಟ್ಟದಲ್ಲಿ ಯೋಜನೆಗಳು ರೂಪುಗೊಳ್ಳಬೇಕು. ಅದಕ್ಕೆ ಬೇಕಾದ ಸಂಪನ್ಮೂಲ ಕ್ರೋಢೀಕರಣ ಕೂಡಾ ಗ್ರಾಮಮಟ್ಟದಲ್ಲೇ ಆಗಬೇಕು. ಇದು ಅಸಾಧ್ಯವೇನಲ್ಲ. ನಮ್ಮ ರಾಜ್ಯದ ಚಿಕ್ಕ ಪಡಸಲಗಿ ಅಣೆಕಟ್ಟು ಇದು ಸಾಧ್ಯ ಎನ್ನುವುದನ್ನು ತೋರಿಸಿಕೊಟ್ಟಿದೆ.

ಕೇಂದ್ರೀಯ ಯೋಜನಾ ಆಯೋಗ ದೇಶಕ್ಕೊಂದು ಹೊರೆ. ಅದನ್ನು ರದ್ದುಪಡಿಸಿ, ಗ್ರಾಮಗಳಿಂದಲೇ ದೇಶ ಕಟ್ಟುವ ಕಾರ್ಯ ಆರಂಭವಾಗಬೇಕಾಗಿದೆ. ಪ್ರತಿಭೆ ಅನ್ನುವುದು ಸರಕಾರಿ ತಜ್ಞರ ಮನಾಪಲಿ ಅಲ್ಲ ಅನ್ನುವುದು ಸರಕಾರಕ್ಕೆ-ಅರ್ಥವಾಗಬೇಕು. ಸಣ್ಣ ಮೊತ್ತದ ಯೋಜನೆಗಳು, ಖಾಸಗೀಕರಣ, ಜನರ ಬದುಕಿಗೆ ಭಾರವಾಗುವ ಊರು ಮುಳುಗಿಸುವ ಯೋಜನೆಗಳ, ಅಣುಸ್ಥಾವರ ರಚನೆಗಳ ಕೈ ಬಿಡುವಿಕೆ ಈಗ ಆಗಬೇಕಾಗಿರುವ ಕಾರ್ಯಗಳು. ಇದಕ್ಕೆ ನಮ್ಮ ಮಿಶ್ರಅರ್ಥವ್ಯವಸ್ಥೆಯ ವ್ಯಾಖ್ಯಾನವೇ ಬದಲಾಗಬೇಕು. ಜನರಿಗೆ ಸುಖನೀಡದ, ದೇಶಕ್ಕೆ ಹೊರೆಯಾಗಿರುವ ಅರ್ಥವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಬೇಕಿದೆ. ಪ್ರಶ್ನೆ ಇಷ್ಟೇ: ಬದಲಾಯಿಸುವವರು ಯಾರು? ★

ಲಾವ್ರೋತ್ಸೆಯ ತಾವ್ರೋ ಪದ್ಯಗಳು

—ಅನು : ಎಸ್. ಮಂಜುನಾಥ

ಸುಮ್ಮನಿರುವ ಸುಮ್ಮಾನ

ದಾರಿ

ನೆರಳೊಳಗೊಂದು ಬಿಂಬ
ಮಸುಕಾಗಿ, ಕಪ್ಪಗೆ
ಒಳಗೊಂದು ಬಿತ್ತ
ದಿಟವಾದ ವಸ್ತು
ಒರೆ ಹಚ್ಚಿ ನೋಡಬಹುದು
ಇಂದಿಂದ ಹಿಂದೆ ಎಂದೆಂದೂ
ಅದೂ ಅದೇ
ದಾರಿ
ಕೂಸಿಗೆ ಸತ್ತ ತಂದೆಯರ ತೋರುವುದು
ತನ್ನಿಂದಲೇ ತಾನು ತಿಳಿಯುವುದು.

ಜ್ಞಾನದ ಕೇಡು

— ೧ —

ಶ್ರೇಷ್ಠತೆಯನ್ನು ಪುರಸ್ಕರಿಸದಿರಿ
ಜನರು ಸಂಚು ಮೇಲಾಟಗಳಲ್ಲಿ ಮುಳುಗುವರು
ದುರ್ಲಭ ವಸ್ತುಗಳು ಅಮೂಲ್ಯವೆನ್ನದಿರಿ
ಜನರು ಕಳ್ಳರಾಗುವರು
ಬಯಕೆಯ ವಿಷಯಗಳ ಕಣ್ಣಿಂದ ಮರೆಗೊಳಿಸಿ
ಜನರ ಹೃದಯಗಳು ನೆಮ್ಮದಿಯಲ್ಲುಳಿಯುವುವು
ರಾಜನಾದರೆ ಜೋಗಿ
ಖಾಲಿಯಿಡುತ್ತಾನೆ ಜನರ ಹೃದಯಗಳ

ತುಂಬಿಸಿರುತ್ತಾನೆ ಹೊಟ್ಟೆಗಳ
ಮನ ಖಾಲಿ
ಮೈಗಟ್ಟಿ
ಜ್ಞಾನ ಮಂಗ್ಧರು ಬಯಕೆ ಮುಗ್ಧರು
ನಡುವೆ ತಲೆ ಹಾಕದಂತೆ ಚಾಣಾಕ್ಷರು
ಕಾರ್ಯಗಳಿಲ್ಲದ ಕ್ರಿಯೆಯಲ್ಲಿ
ಬಾಳುವಂತೆಲ್ಲರೂ ಸುಮ್ಮಾನದಲ್ಲಿ

— ೨ —

ಸಂತನ ರುಂಡ ಹೊಡೆ ಜ್ಞಾನಿಯ ಕರಿನೀರ ದಾಟಿಸು
ಜನತೆಗೆ ಅದರಿಂದ ಲಾಭ ನೂರು ಲಾಭ
ನ್ಯಾಯವ ಗಡಿ ಪಾರು ಮಾಡು ಕರುಣೆಯ ಕತ್ತಲ ಕೋಣೆಗೆ ದೂಡು
ಜನರು ಮರಳಿ ನಿಷ್ಠೆಯನು ಕಾಣುವರು
ಚತುರತೆಯ ಧಿಕ್ಕರಿಸು ಉಪಯುಕ್ತತೆಯ ಬಹಿಷ್ಕರಿಸು
ಕಳ್ಳರು ದರೋಡೆಕಾರರೂ ಅಡಗಿ ಹೋಗುವರು
ಜನರಿಗೆ ಬೇಕಿರುವುದು ಒಂದು ಆಧಾರ
ತೋರು ಸರಳ ಸ್ವಭಾವ
ಅಪ್ಪು ಮೂಲ ಪ್ರಕೃತಿ
ತಡೆ ಹಾಕು ಸ್ವಾರ್ಥಕ್ಕೆ
ಬಯಕೆಗಳ ಮುಗಿಸು

ಸ್ವಭಾವ ಹಾನಿ

— ೧ —

ತಲೆ ಮೇಲೆ ನಿಂತ ಮಹನೀಯರ ನೋಡಿಕೋ
ಇವರು ದೊಂಬರಲ್ಲ!
ದಳಪತಿಗಳು ಇವರು ಅಧಿಕಾರಿಗಳು ಪಂಡಿತರು ಸಂತರು
ಪದವಿ ಪದಕಗಳೆ ಸಂತೋಷವೆಂದು ಬಗೆದರು
ಪೂರ್ಣ ಸಂತೋಷವೆ ಯಶಸ್ಸೆಂದು ನಂಬಲಿಲ್ಲ
ಪದವಿ ಹೋಗಲು ಖಿನ್ನರಾದರು
ಅದು ಒದಗಿದ್ದಾಗ ತಮ್ಮನ್ನೆ ತೆತ್ತಿದ್ದರು
ಕೊಟ್ಟಾಗ ಬೇಡೆನಲಾಗದ
ಕಿತ್ತುಕೊಳುವಾಗ ಬೇಡೆನಲಾಗದ

ಸಾಲ, ಪದವಿ ಪದಕಗಳು
ಇದ ತಿಳಿಯದೇ ಉರುಳಿದರು

— ೨ —

ಮಂದಿ ಲಾಭಕ್ಕಾಗಿ ಸ್ವಭಾವಗೆಟ್ಟರು
ಪಂಡಿತರು ಕೀರ್ತಿಗಾಗಿ ಸ್ವಭಾವ ಗೆಟ್ಟರು
ಗಣ್ಯರು ಕುಟುಂಬಕ್ಕಾಗಿ ಸ್ವಭಾವ ಗೆಟ್ಟರು
ಸಂತ ಜನತೆಗಾಗಿ ಸ್ವಭಾವ ಗೆಟ್ಟರು
ವಸ್ತು ಬಾಧೆಗೊಳಗಾಗಿ ಸ್ವಭಾವಗೆಡದವರ್ಯಾರೂ ಇಲ್ಲಃ
ಶಾಸ್ತ್ರವೋದುತ್ತ ಕುರಿ ಕಳಕೊಂಡನೊಬ್ಬ ಕುರುಬ
ಜೂಜಾಡುತ್ತ ಕಳೆದುಕೊಂಡ ಮತ್ತೊಬ್ಬ–ಎಂಬಂತೆ

ಮರವು

ತಿಳಿಯುವುದೆಂದರೆ ಒಡೆಯುವುದು
ಇಡಿಯಾದ ನಿರಾಕಾರ ಮರವನ್ನು
ಕಾಂಡ ಟೊಂಗೆ ಎಲೆ ರಾಶಿ ಹಬ್ಬದ ಹರಹು
ತನ್ನ ಬೇರೊಳಗಿಳಿದು ತಾನೆ ಮರವು

ಬುದ್ಧಿಯೆಂಬುದು ಚ್ಛಿಷ್ಮ, ಉಗಿ
ಹೃದಯವನೂಡು ಉಣಿಸು
ಸ್ಥಿತ್ಯಂತರಗಳ ಮರೆತು
ಅಸೀಮದಲ್ಲೊಂದಾಗು
ಬಿಡು ಮನವ ಬಿಡುಗಡೆಗೊಳಿಸು ಚೇತನ
ಖಾಲಿಯಾಗು ನಿರಾತ್ಮನಾಗು
ಹೀಗೆ ಎಲ್ಲವೂ ಬೆಳೆದು ಫಲಗೊಂಡು
ತಿರುಗುವುದು ಬೇರಿಗೇ
ಹೇಗೆಂಬುದು ತಿಳಿಯದೇ

ಶಾಶ್ವತ ಅರ್ಥಶಾಸ್ತ್ರ-೧೫. ವ್ಯವಸಾಯ

—ಜೆ. ಸಿ. ಕುಮಾರಪ್ಪ

(ಜೆ.ಸಿ. ಕುಮಾರಪ್ಪ ಪಾಶ್ಚಿಮಾತ್ಯ ಅರ್ಥಶಾಸ್ತ್ರ ಓದಿ ನಂತರ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಓರ್ವ ವಿಚಾರವಂತ ವ್ಯಕ್ತಿ. ಅವರು ಗಾಂಧೀಜಿಯವರ ವಿಚಾರಗಳಿಗೆ ಮುಖ್ಯವಾಗಿ, ಆರ್ಥಿಕ ವಿಚಾರಗಳಿಗೆ, ಒಂದು ಸ್ವರೂಪ ಕೊಟ್ಟರು. ಅದನ್ನು ಅವರು 'ಶಾಶ್ವತ ಅರ್ಥಶಾಸ್ತ್ರ' ಎಂದು ಕರೆದರು. ಈ ಅರ್ಥಶಾಸ್ತ್ರಕ್ಕೂ ಈಗ ಪ್ರಚಲಿತವಿರುವ ಅರ್ಥಶಾಸ್ತ್ರಕ್ಕೂ ಇರುವ ವ್ಯತ್ಯಾಸ ನಮಗೆ ತಿಳಿದರೆ ಅದರಿಂದ ಬಹಳ ಪ್ರಯೋಜನವುಂಟು. ಅದಕ್ಕಾಗಿ ಆ ಪುಸ್ತಕದ ಭಾಗಗಳನ್ನು ಕ್ರಮಶಃ ಪ್ರಕಟಿಸಲಾಗುತ್ತಿದೆ. ಅನುವಾದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ—ಸಂ.)

ಪ್ರಥಮ ಯೋಗಕ್ಷೇಮ ಅನ್ನ – ಬಟ್ಟೆಯದು. ಇದಕ್ಕಾಗಿ ನಾವು ವ್ಯವಸಾಯ–ಗ್ರಾಮೋದ್ಯೋಗಗಳ ಮೇಲೇ ದೃಷ್ಟಿಯನ್ನು ಕೇಂದ್ರೀಕರಿಸಬೇಕು. ವ್ಯವಸಾಯದ ಉತ್ಪತ್ತಿಯನ್ನು ನಿರ್ದಿಷ್ಟಗೊಳಿಸಿ ನಿಯಂತ್ರಣ ಮಾಡಬೇಕು. ಹಾಗೆ ಮಾಡುವಾಗ ಈ ಮಾತನ್ನು ಗಮನಿಸಬೇಕು: ಆಯಾ ಸ್ಥಳಕ್ಕೆ ಬೇಕಾದ ಆಹಾರವನ್ನೂ, ದಿನ ಬಳಕೆಯ ಪದಾರ್ಥಗಳಿಗೆ ಅಗತ್ಯವಾದ (ಕಚ್ಚಾಮಾಲು) ಮೂಲ ವಸ್ತುಗಳನ್ನೂ ಉತ್ಪತ್ತಿ ಮಾಡಬೇಕೇ ವಿನಾ ಗಿರಣಿ–ಕಾರಖಾನೆಗಳಿಗಲ್ಲ. ಉದಾ! ಗಿರಣಿಗಳಿಗೆ ಬೇಕಾದ ಮರಗಬ್ಬನ್ನೋ. ಉದ್ದ ತೊಳೆಯ ದೊಡ್ಡ ಹತ್ತಿಯನ್ನೋ ಬೆಳೆಯದೆ ಹಳ್ಳಿಯ ಆಲೆ ಮನೆಯಲ್ಲಿ ಗಾಣಮಾಡಲು ಅನುಕೂಲವಾದ ಕಬ್ಬನ್ನೂ ಕೈರಾಟೆಯಿಂದ ನೂಲಲು ಅನುಕೂಲವಾದ ಸಣ್ಣ ತೊಳೆಹತ್ತಿಯನ್ನೂ ಬೆಳೆಯಬೇಕು. ಹೆಚ್ಚು ಭೂಮಿಯಿದ್ದರೆ ಪಕ್ಕದ ಜಿಲ್ಲೆಗಳವರಿಗೆ ಬೇಕಾದ ಬೆಳೆಗಳನ್ನು ಬೆಳೆಯಬಹುದು. ಗಿರಣಿ ಕಬ್ಬು, ಹೊಗೆಸೊಪ್ಪು, ಸೆಣಬು ಮುಂತಾದ ವ್ಯಾಪಾರದ ಪೈರನ್ನು ಆದಷ್ಟೂ ಕಡಿಮೆ ಮಾಡಬೇಕು. ಅಗತ್ಯವಾದರೆ ಪೂರಾ ನಿಲ್ಲಿಸಿಯೇ ಬಿಡಬೇಕು. ರೈತರು ಈ ನಿಯಮವನ್ನು ಅನುಸರಿಸುವಂತೆ ಮಾಡಲು ಸರಕಾರ ಆಯಾ ಪ್ರದೇಶದ ಯೋಜನೆಗೆ ಅನುಸಾರವಾಗಿ ಇಂಥದೇ ಬೆಳೆ ಬೆಳೆಯಬೇಕೆಂದು ನಿಗದಿ ಮಾಡಬೇಕು, ಅಪ್ಪಣೆ–ಚೀಟಿಗಳನ್ನು ಕೊಡಬೇಕು. ವ್ಯಾಪಾರದ ಬೆಳೆ

ಬೆಳೆದರೆ ಆ ಭೂಮಿಗೆ ಹೆಚ್ಚು ಕಂದಾಯ ಹಾಕಬೇಕು. ಆಗ ಆಹಾರದ ಬೆಳೆಯು ಬದಲು ವ್ಯಾಪಾರದ ಬೆಳೆ ಬೆಳೆಯುವ ಹುರುಪು ರೈತನಿಗೆ ಕಡಮೆಯಾಗುತ್ತದೆ. ಕೈಗಾರಿಕೆಯ ಪದಾರ್ಥಗಳಿಗೂ ವ್ಯವಸಾಯದ ಪದಾರ್ಥಗಳಿಗೂ ಬೆಲೆ ಸಮಾನವಾಗಿರುವಂತೆ ಬೆಲೆಯ ನಿಗದಿ-ನಿಯಂತ್ರಣ ಮಾಡಬೇಕು.

ಹೊಗೆಸೊಪ್ಪು, ಸೆಣಬು, ಕಬ್ಬು ಮುಂತಾದವು ಎರಡು ರೀತಿ ನಷ್ಟ ಮಾಡುತ್ತವೆ. ಮನುಷ್ಯನಿಗೂ ಆಹಾರ ಕಡಮೆ ಮಾಡುತ್ತವೆ, ದನಗಳಿಗೂ ಆಹಾರ ಲೋಪ ಮಾಡುತ್ತವೆ. ಇವನ್ನು ಬಿಟ್ಟು ಆಹಾರದ ಪೈರನ್ನು ಬೆಳೆದರೆ ದನಕ್ಕೆ ಮೇವು ಆಗುತ್ತದೆ.

ಧಾನ್ಯ ಹಾಲು ಎರಡೂ ಮೂಲ ಪದಾರ್ಥಗಳು, ಪ್ರಾಥಮಿಕ ಪದಾರ್ಥಗಳು. ಪಿಷ್ಟಕ್ಕಾಗಿ ಅದನ್ನು, ಕೇಸಿನ್‌ಗಾಗಿ ಇದನ್ನು ಬಳಸಿ ದುಡ್ಡು ಮಾಡಲು ಬಿಡಬಾರದು. ಗಿರಣಿ ಕಬ್ಬಿನ ಬೆಳೆ ಕಡಮೆಯಾದರೆ ಬೆಲ್ಲದ ಉತ್ಪತ್ತಿ ಕಡಮೆಬೀಳಬಹುದು. ಈಗ ಹೆಂಡಕ್ಕಾಗಿ ಉಪಯೋಗಿಸುತ್ತಿರುವ ತಾಳೆಗಿಡಗಳಿಂದ ಬೆಲ್ಲ ಮಾಡಬಹುದು. ಬಂಜರುಭೂಮಿಯಿದ ಬೇಕಾದ ಹಾಗೆ ಬೆಳೆಯುವ ಬೇರೆ ಮರಗಳಿಂದ ಬೆಲ್ಲವನ್ನು ಮಾಡಿ, ಈಗ ಕಬ್ಬು ಬೆಳೆಯುವ ಉತ್ತಮ ಭೂಮಿಯನ್ನು ಧಾನ್ಯ. ಹಣ್ಣು ಹಂಪಲು, ಕಾಯಿಪಲ್ಯ ಬೆಳೆಸಲು ಉಪಯೋಗಿಸಬಹುದು. ದೇಶಕ್ಕೆ ಈ ಪದಾರ್ಥ ಈಗ ಅತ್ಯಗತ್ಯ.

ಪ್ರಥಮತಃ ಉಚಿತವಾದ ಆಹಾರ. ಭಾರತದಲ್ಲಿ ಈಗ ಬರೀ ಧಾನ್ಯ ತಿನ್ನುವವರು ಅನೇಕರಿದಾರೆ. ಬರೀ ಧಾನ್ಯಗಳಿಂದ ದೇಹಕ್ಕೆ ಬೇಕಾದುದೆಲ್ಲವೂ ಒಂದೇ ಕಡೆ ಸಿಗದು. ಎಲ್ಲಾ ಅಂಶಗಳೂ ಇರುವ ಪೂರ್ಣಾಹಾರಕ್ಕೆ ಬೇಕಾದುದನ್ನು ಬೆಳೆಯುವ ಹಾಗೆ ಪ್ರತಿಯೊಂದು ಹಳ್ಳಿಯ ವ್ಯವಸಾಯವನ್ನೂ ವ್ಯವಸ್ಥೆಗೊಳಿಸಿದರೆ, ಆಗ ಸರ್ವಾಂಶ ಪೂರ್ಣ ಆಹಾರ ನಮಗೆ ಸಿಗುತ್ತದೆ. ಒಂದೊಂದು ಬಗೆಯ ಆಹಾರ ಪದಾರ್ಥಕ್ಕೆ ಎಷ್ಟು ಎಕರೆ ಬೇಕೆಂಬುದನ್ನು ಲೆಕ್ಕ ಹಾಕಿ ನಿರ್ದಿಷ್ಟಗೊಳಿಸಬಹುದು.

ಸಾಧಾರಣವಾಗಿ ಒಂದು ಎಕರೆ ನೆಲದಲ್ಲಿ ಬೇರೆ ಏನು ಬೆಳೆದರೂ ಧಾನ್ಯವನ್ನು ಬೆಳೆದರೆ ಸಿಗುವಷ್ಟು ಆಹಾರ ಸಿಗುವುದಿಲ್ಲವೆಂದು ತಿಳಿದಿದಾರೆ, ಧಾನ್ಯದಿಂದ ಆಹಾರದಲ್ಲಿ ಉರವಲು ಹೆಚ್ಚೀ ವಿನಾ ಪುಷ್ಟಿ ಹೆಚ್ಚಲ್ಲ. ಬರೀ ಧಾನ್ಯದಿಂದಲೇ ಉಷ್ಣ-ಪುಷ್ಟಿ ಎರಡೂ ಬೇಕು ಎಂದರೆ ಬಹಳ ಹೆಚ್ಚು ಧಾನ್ಯವನ್ನು ಬಳಸಬೇಕಾಗಿ ಬರುತ್ತದೆ. ಅದರ ಜೊತೆಗೆ ಹಣ್ಣು ಹಂಪಲು, ಕಾಯಿಪಲ್ಯ, ಹಾಲು ಮೊಸರು, ಬೆಣ್ಣೆ ತುಪ್ಪ, ಕಾಯಿ ಬೆಲ್ಲ, ಎಣ್ಣೆ ಬೀಜ ಮುಂತಾದುವನ್ನು ಸೇರಿಸಿಕೊಂಡರೆ ಧಾನ್ಯಕ್ಕಿಂತ ಬಹಳ ಕಡಮೆ ಪ್ರಮಾಣದಲ್ಲಿ ಬಳಸಿದರೂ ಇವುಗಳಿಂದ ಹೆಚ್ಚು ಪುಷ್ಟಿ ಬರುತ್ತದೆ. ಒಂದು ಎಕರೆ ಧಾನ್ಯದ ಪೈರಿಗಿಂತ ಉಷ್ಣದ ಉತ್ಪತ್ತಿಯಲ್ಲಿಯೂ

ಒಂದೆಕರೆ ಆಲೂಗಡ್ಡೆಯಂಥ ಗಡ್ಡೆಗೆಣಸು, ಬೆಲ್ಲದ ಪೈರು ಸ್ವಲ್ಪ ಹೆಚ್ಚೇ. ಆದುದರಿಂದ ಸರ್ವಾಂಶ ಪೂರ್ಣವಾದ ಸಮಗ್ರ ಆಹಾರ ಪದ್ಧತಿ ನಮಗೆ ಉಭಯ ಫಲ ಕೊಟ್ಟೀತು, ನಮ್ಮ ಸಮಸ್ಯೆಯನ್ನು ಬಿಡಿಸೀತು. ದೇಹಕ್ಕೆ ಬೇಕಾದ ಪದಾರ್ಥಗಳನ್ನೆಲ್ಲ ಸರಿಯಾದ ಪ್ರಮಾಣದಲ್ಲಿ ಕೊಟ್ಟು ಅದನ್ನು ಆರೋಗ್ಯವಂತವಾಗಿ ಸಶಕ್ತವಾಗಿ ಇಟ್ಟೀತು ; ತಲಾ ಎಷ್ಟು ಭೂಮಿ ಬೇಕೆಂಬುದರ ಪ್ರಮಾಣವನ್ನೂ ಕಡಮೆ ಮಾಡೀತು. ಈಗ ಭಾರತದಲ್ಲಿ ಆಹಾರದ ಉತ್ಪತ್ತಿಗಾಗಿ ಸಿಗುತ್ತಿರುವ ಭೂಮಿ ತಲಾ ೦.೭ ಎಕರೆಯಷ್ಟು. ಈಗಿನ ಬೇಸಾಯದ ಪ್ರಕಾರ ನಮ್ಮ ಆಹಾರಕ್ಕೇ ಸಾಲದ ಈ ೦.೭ ಎಕರೆ ಭೂಮಿಯೇ, ವ್ಯವಸಾಯವನ್ನು ಪುನರ್ವ್ಯವಸ್ಥೆಗೊಳಿಸಿದಾಗ ಸಾಕಾಗಬಹುದು. ಅಲ್ಲಲ್ಲಿಯ ಭೂಮಿಯನ್ನು ಆಯಾ ಸ್ಥಳದ ಜನರಿಗೆ ಅಗತ್ಯವಾದ ಸಮಗ್ರ ಆಹಾರ, ಬಟ್ಟೆ, ಇತರ ಅವಶ್ಯಕತೆಗಳಿಗೆ ಸರಿಯಾಗಿ ಕೃಷಿ ಮಾಡುವಂತೆ ಏರ್ಪಡಿಸಬೇಕು. ಈ ಬೆಳೆಗಳ ಪ್ರಮಾಣವನ್ನು ನಿರ್ಧರಿಸಿ ರೈತರು ತಮ್ಮ ಹೊಲಗಳಲ್ಲಿ ಇಂಥಿಂಥ ಬೆಳೆಯನ್ನೇ ಬೆಳೆಯಬೇಕೆಂದು ಗೊತ್ತು ಮಾಡಬೇಕು. ಸಸ್ಯಾಹಾರಿಗಳಾದ ಜನರಿಗೆ ದಿನವೊಂದಕ್ಕೆ ತಲಾ ೨,೮೬೦ ಕ್ಯಾಲರಿಗಳನ್ನೂ ವರ್ಷಕ್ಕೆ ೨೫ ಗಜ ಬಟ್ಟೆಯನ್ನೂ ಒದಗಿಸಲು ಅದರಲ್ಲಿ ಏರ್ಪಾಟು ಇದೆ. ಮಾಂಸಾಹಾರಿಗಳು ೬ ಔನ್ಸು ಹಾಲಿಗೆ ಬದಲಾಗಿ ೯ ಔನ್ಸು ಮಾಂಸವನ್ನೋ ಮೊಟ್ಟೆಯನ್ನೋ ಮೀನನ್ನೋ ಬಳಸಬಹುದು.

ಇಡೀ ಭಾರತದ ಅಂಕಿ ಅಂಶಗಳ ಆಧಾರದಿಂದ ಸ್ಥೂಲವಾಗಿ ಲೆಕ್ಕ ಮಾಡಿ ಕೊಟ್ಟಿದೆ. ಇದು ಆಯಾ ಸ್ಥಳಕ್ಕೆ ತಕ್ಕಂತೆ ವ್ಯತ್ಯಾಸವಾಗುತ್ತದೆ. ತಲಾ ೧೬ ಔನ್ಸು ಧಾನ್ಯ ಎಂದರೆ ನಮ್ಮ ಭೂಮಿಯಲ್ಲಿ ೬೫.೨% ರಷ್ಟು ಧಾನ್ಯದ ಬೆಳೆಗೇ ಆಗುತ್ತದೆ. ಅದೇ ರೀತಿ, ತಲಾ ೨ ಔನ್ಸು ಬೇಳೆ ಎಂದರೆ ಶೇ ೮ ರಷ್ಟು ಭೂಮಿ ಆ ಬೆಳೆಗೆ.

ಒಂದು ಲಕ್ಷ ಜನರಿಗಾಗಿ ಲೆಕ್ಕ ಹಾಕಿದೆ. ಒಂದು ಹಳ್ಳಿ ಅಥವಾ ನಾಲ್ಕಾರು ಹಳ್ಳಿಗಳ ಗುಂಪು ಈ ಪ್ರಮಾಣದಲ್ಲಿ ಬೆಳೆ ಬೆಳೆದರೆ ಜನರ ಸಾಮಾನ್ಯ ಪ್ರಾಥಮಿಕ ಅಗತ್ಯಗಳೆಲ್ಲ ತೃಪ್ತಿಯಾಗುತ್ತವೆ. ಆದುದರಿಂದ ನಾವು ಇವನ್ನು ಬೆಳೆಯಲು ಯತ್ನಿಸಬೇಕು. ಭೂಮಿ ಸಮಾಜದ ಸೊತ್ತು. ಅದನ್ನು ಸಮಾಜಕ್ಕೆ ಉಪಯೋಗವಾಗುವ ರೀತಿಯಲ್ಲಿಯೇ ಉಪಯೋಗಿಸಬೇಕು. 'ನನಗೆ ಇಷ್ಟು ಎಕರೆ ಹೊಲವಿದೆ. ನಾನು ಹೊಗೆಸೊಪ್ಪನ್ನು ಬೆಳೆಯುತ್ತೇನೆ' ಎಂದರೆ ಆಗದು. ತನಗೆ ಹೆಚ್ಚು ದುಡ್ಡು ಬರುತ್ತದೆ ಎಂದು ಅವನ ಮನಸ್ಸಿಗೆ ಬಂದ ಹಾಗೆ ಹೊಗೆಸೊಪ್ಪನ್ನು ಬೆಳೆಯುವ ಹಾಗಿಲ್ಲ. ವೈಯಕ್ತಿಕವಾಗಿ ನಮಗೆ ಎಷ್ಟೋ ಆಸೆ–ಯೋಚನೆ ಇರುತ್ತವೆ. ಸಮಾಜದಲ್ಲಿ ಎಲ್ಲವನ್ನೂ ನಮ್ಮ ಇಷ್ಟದಂತೆಯೇ ನಡೆಸುವ ಹಾಗಿಲ್ಲ. ರಸ್ತೆಯಲ್ಲಿ ಬಲಗಡೆ ಗಾಡಿ ಹೊಡೆಯುತ್ತೇನೆ ಎಂದರೆ ಆದೀತೆ? ಭೂಮಿ ನಿನ್ನ ಸೊತ್ತೇನೋ ನಿಜ. ಆದರೆ ಸರ್ವಜನೋಪಯೋಗವಾಗುವಂತೆ ಅದನ್ನು

ಉಪಯೋಗಿಸಬೇಕು. ಆದುದರಿಂದಲೇ, ಇಂಥಿಂಥ ಬೆಳೆಯನ್ನು ಬೆಳೆಯಲು ಅಪ್ಪಣೆ ಪಡೆಯಬೇಕು ಎನ್ನುವುದು. ಎಳ್ಳು ಬೆಳೆಯಲು ಅಪ್ಪಣೆ ಪಡೆದವನು ಹೊಗೆಸೊಪ್ಪು ಬೆಳೆಯಕೂಡದು. ಅದರಿಂದ ಹತ್ತು ಪಟ್ಟು ಹೆಚ್ಚು ಲಾಭ ಬಂದರೂ ಬೆಳೆಯಕೂಡದು.

ಹಳ್ಳಿಗಳಲ್ಲಿ ಬೆಳೆದುದನ್ನು ಹಳ್ಳಿಗಳಲ್ಲಿಯೇ ನಮಗೆ ಬೇಕಾದಷ್ಟನ್ನೆಲ್ಲ ಬಳಸುವುದು ನಮ್ಮ ಉದ್ದೇಶ್ಯ. ನಮಗೆ ಆಗಿ ಉಳಿದುದನ್ನು ನಮ್ಮಲ್ಲಿ ಬೆಳೆಯದ ಬೇರೆ ಕಡೆಯಿಂದ ನಾವು ತರಿಸಬೇಕಾದುದಕ್ಕೆ ವಿನಿಮಯ ಮಾಡಬೇಕು. ಉದಾ : ಒಂದು ಹಳ್ಳಿಯಲ್ಲಿ ಹತ್ತಿಯನ್ನು ಬೆಳೆದರೆ ಅದನ್ನು ಗಿರಣಿಗೆ ಕಳಿಸಿ ಬಟ್ಟೆ ಮಾಡಿಸಿ ತರಬೇಕಾಗಿಲ್ಲ. ಹತ್ತಿಯನ್ನು ಬಟ್ಟೆಯಾಗಿ ಮಾಡಿಸಿದುದಕ್ಕೆ ನಾವು ಮತ್ತೇನಾದರೂ ಪದಾರ್ಥವನ್ನು ಕೊಡಬೇಕಲ್ಲವೆ, ವಿನಿಮಯವಾಗಿ ? ಅದಕ್ಕಾಗಿ ನಮ್ಮ ಧಾನ್ಯವನ್ನು ಕಳೆದುಕೊಳ್ಳಬಾರದು ಎಂದರೆ, ನಮ್ಮ ಹತ್ತಿಯನ್ನು ನಾವೇ ಬಿಡುವಿದ್ದಾಗ ಬಟ್ಟೆಯಾಗಿ ಮಾಡಿಕೊಳ್ಳಬೇಕು. ಹಾಗೆ ಮಾಡಿದರೆ ನಮ್ಮ ಧಾನ್ಯವೆಲ್ಲ ನಮಗೇ ಉಳಿಯಿತು. ಜೊತೆಗೆ ಬಟ್ಟೆಯೂ ಆಯಿತು. ಎರಡೂ ರೀತಿಯಲ್ಲಿ ಲಾಭ. ಇದರಿಂದ ಬಟ್ಟೆ–ಗಿರಣಿಗಳವರಿಗೆ ನಷ್ಟವಾಗುತ್ತದೆ. ಅದನ್ನು ಕಂಡು ನಮಗೆ ಕನಿಕರವಾಗುತ್ತದೆ. ಆದರೆ ಪಾಪ, ಬಡರೈತರನ್ನು ಹಳ್ಳಿಯವರನ್ನು ಕಾಪಾಡಬೇಡವೆ ? ಹಳ್ಳಿಯವರ ಮೇಲು ತಾನೆ ನಮ್ಮ ಗುರಿ. ಹಾಗಿದ್ದರೆ ಈ ರೀತಿ ಮಾಡಿದರೇನೇ ಹಳ್ಳಿಗಳು ಅನ್ನ–ಬಟ್ಟೆಗಳಲ್ಲಿ ಪರಿಪೂರ್ಣವಾಗಬಲ್ಲವು.

ಹೀಗೆ ಸಮಗ್ರ ಆಹಾರದ ಅಂಶಗಳನ್ನು ಗಮನಿಸಿ, ಅದನ್ನು ಒದಗಿಸಿಕೊಂಡು ಜನರಿಗೆ ಆಹಾರ ನೀಡಲು ಏನೇನು ಬೆಳೆಯಬೇಕೋ ನಿರ್ಧರಿಸಬೇಕು. ಆ ಸ್ಥಳದ ಜನರಿಗೆ ಹೊಟ್ಟೆ ತುಂಬಾ ಆಗಿ ಮಿಕ್ಕರೆ ಅದನ್ನು ಹೊರಗೆ ಕಳಿಸಬಹುದು. ಅಲ್ಲಿಯವರೆಗಲ್ಲ. ಅಲ್ಲಿನ ಜನರಿಗೇ ಸಾಲದೆ ಬರುವ ಪದಾರ್ಥಗಳನ್ನು ಹೊರಗೆ ಸಾಗಿಸುವುದು ಸಾಗಾಣಿಕೆಯ ವ್ಯವಸ್ಥೆ ಭೂಮಿಗೆ–ಬೇಸಾಯಕ್ಕೆ ಮಾಡಿದ ದ್ರೋಹ. ಅದೇ ರೀತಿ ಜನರು ಯಾವುದಾದರೂ ರೀತಿಯಲ್ಲಿ ಪ್ರಯೋಜನಕರವಾದ ಕೆಲಸದಲ್ಲಿ ತೊಡಗಲು ಅಗತ್ಯವಾದ ಸಾಮಗ್ರಿಯನ್ನು ಒದಗಿಸಲು ಪ್ರಯತ್ನಗಳು ನಡೆಯಬೇಕು.

ಬೆಂಗಳೂರು, ಬೆಂಗಳೂರು ....

—ಶ್ರೀನಿವಾಸ

ಸಂತೋಷ,

ಈ ನಗರದಲ್ಲಿ " ಹಾಯಾದ ಈ ಸಂಜೆ " ... ಎಂದು ಹಾಡುವ ಹಾಗೆಯೇ ಇಲ್ಲ. ' ಸಂಜೆ ' ಎನ್ನುವ ಪದಕ್ಕೆ ಇಲ್ಲಿ ಅರ್ಥ ಕಲ್ಪಿಸುವುದು ಶುದ್ಧ ಮೂರ್ಖತನ. ಕಾಗೆಗಳ ಹೊರತು ಇನ್ನು ಯಾವ ಹಕ್ಕಿಯೂ ಹಾಡುವುದಿಲ್ಲ. ಕಾಗೆಗಳು ಅರಚು ತ್ತವೆ, ಅಷ್ಟೆ ; ಚಿಲಿಪಿಲಿ ಗುಟ್ಟುವುದಿಲ್ಲ. ಸಂಜೆಯಾದಂತೆ ಆಕಾಶ ಕಡುನೀಲಿ ಯಾಗುವುದಿಲ್ಲ. ಬದಲಿಗೆ ದಟ್ಟವಾದ ಹೊಗೆ ತುಂಬಿ ಅದರೊಡನೆ ಧೂಳು ಬೆರೆತು ಕೆಂಪು ವರ್ಣಕ್ಕೆ ತಿರುಗುತ್ತದೆ. ಸೂರ್ಯ ಅದೆಲ್ಲಿ ಅಸ್ತಂಗತವಾಗುವುದು ಎನ್ನುವ ದೃಶ್ಯ ಕಾಣುವುದೇ ಇಲ್ಲ. ಗೋಧೂಳಿಯೇಳುವುದಿಲ್ಲ. ಸಂಜೆ ಜನರಿಗೆ ಹುರುಪು, ಉಲ್ಲಾಸ ತರುವುದಿಲ್ಲ. ಆತಂಕವನ್ನು ತಂದೊಡ್ಡುತ್ತದೆ. ಕಛೇರಿಗಳಿಂದ, ಕಾರ್ಖಾನೆ ಗಳಿಂದ ಜನಸ್ತೋಮ ಅಥವಾ ಹಿಂಡು ರಸ್ತೆಗಿಳಿಯುತ್ತದೆ.

ಯಾವುದೋ ಅಸ್ಥಿರತೆ, ಚಡಪಡಿಕೆ ಮನಸ್ಸನ್ನು ಕವಿಯುತ್ತದೆ. ಬಸ್ ನಿಲ್ದಾಣಗಳಲ್ಲಿ, ಕಾಲು ಹಾದಿಗಳಲ್ಲಿ, ರೋಡ್ ಕ್ರಾಸಿಂಗ್‌ಗಳಲ್ಲಿ ಒಮ್ಮೆಲೇ ಜನ ಸಾಂದ್ರತೆ ಹೆಚ್ಚುತ್ತದೆ. ಉದ್ದನೆಯ ಸರತಿಯ ಸಾಲುಗಳು ಬೆಳೆಯುತ್ತವೆ. ಬಸ್ಸುಗಳಿಗೆ, ಆಟೋಗಳಿಗೆ, ಸಿನಿಮಾ ಟಿಕೇಟುಗಳಿಗೆ ಇನ್ನು ಇತ್ಯಾದಿಗಳಿಗೆ. ಸಿನಿಮಾ, ಹೋಟೆಲು, ಬಾರುಗಳು ದೀಪಗಳನ್ನು ಬೆಳಗುತ್ತವೆ. ಕಾರುಗಳು ಬಾರುಗಳನ್ನು ಮುತ್ತುತ್ತವೆ. ಎಲ್ಲಿಂದಲೋ ಅಲ್ಲಿಗೆ ಬಂದವರು ಮತ್ತೆಲ್ಲಿಂದಲೋ ಅಲ್ಲಿಗೆ ಬರಬೇಕಾದ ವರಿಗೆ ಕಾಯುತ್ತಾ ಕೂರುತ್ತಾರೆ. ರಸ್ತೆ ಬದಿಯ ' ಪಬ್ ' ಗಳಿಂದ ಹಿಡಿದು ಪಂಚತಾರಾ ಹೋಟೆಲ್ಲುಗಳ ವರೆಗೆ ಪಾರ್ಟಿಗಳು ಶುರುವಾಗುತ್ತವೆ. ಹೊಸದಾಗಿ ಕೆಲಸ ಸಿಕ್ಕಿದ್ದಕೊಂದು ಪಾರ್ಟಿ; ನಿವೃತ್ತಿಯಾಗಿ ಪಿಂಚಣಿ ಪಡೆಯುವುದಕ್ಕೊಂದು ಪಾರ್ಟಿ.

ಗಲಭೆಕೋರರ ಮೇಲೆ ಅಶ್ರುವಾಯು ಪ್ರಯೋಗಿಸಿದಂತೆ ಅನಿಶ್ಚಿತತೆ, ಗಲಿಬಿಲಿ, ಕಳವಳ, ಆತುರ, ಗಡಿಬಿಡಿ, ಧಾವಂತ, ತವಕ ಇನ್ನೂ ಇತ್ಯಾದಿಗಳು ತಲೆ

ದೋರುತ್ತವೆ. ಮಾರ್ಗ ಸೂಚಿ ಫಲಕಗಳಿಲ್ಲದ ಕೆಂಪು ಸಿಟಿಬಸ್‌ಗಳು ಯದ್ವಾ ತದ್ವಾ ಧಾವಿಸುತ್ತವೆ. ಆಟೋರಿಕ್ಷಾಗಳು ಕಿರುಚುತ್ತವೆ. ದ್ವಿಚಕ್ರವಾಹನಗಳು ರಸ್ತೆಯನ್ನೆಲ್ಲ ಆಕ್ರಮಿಸಿ ಅರಚುತ್ತಾ ಸರ್ಕಸ್ ಮಾಡಲಾರಂಭಿಸುತ್ತವೆ.

ಸಂಜೆಯಾಯಿತೆಂದು ಯಾವ ನರಪ್ರಾಣಿಯೂ ಹಿಗ್ಗುವುದಿಲ್ಲ. ಬದಲಿಗೆ ತತ್ತರಿಸಲಾರಂಭಿಸುತ್ತದೆ. ಮಕ್ಕಳು ಮನೆಗೆ ಧಾವಿಸಿ ಹೋಂ ವರ್ಕ್ ಮಾಡಲು ಅಥವಾ ಟ್ಯೂಷನ್‌ಗೆ ಸಿದ್ಧರಾಗುತ್ತಾರೆ. ಮುದುಕರು ಟಿ. ವಿ. ಯ ಮುಂದೆ ಆಸೀನರಾಗುತ್ತಾರೆ. ವಯಸ್ಸಾದ ಹೆಂಗಸರು ಮನೆಯ ಹತ್ತಿರದ ದೇವಸ್ಥಾನದ ಬಳಿಯೋ ಅಥವಾ ಮನೆ ಕಾಂಪೌಂಡುಗಳ ಅಕ್ಕ ಪಕ್ಕದಲ್ಲಿ ಸಭೆ ಸೇರುತ್ತಾರೆ. ಹೊಸದಾಗಿ ಮದುವೆಯಾದವರು, ತರುಣರು, ಕಿಶೋರಿಯರು ಷಾಪಿಂಗ್ ಮಳಿಗೆಗಳ ಬಳಿಗೆ ಧಾವಿಸುತ್ತಾರೆ. ಶಾಲೆಗಳ ಬಳಿ ಆಯಾಗಳು, ಸ್ಕೂಟರ್, ಕಾರುಗಳಲ್ಲಿ ಮನೆಯವರು, ಬಾಡಿಗೆಗೆ ಗುತ್ತಿಗೆ ಹಿಡಿದ ಆಟೋರಿಕ್ಷಾಗಳು ನೆರೆಯುತ್ತವೆ.

ನಾಳೆಯ ಅಡಿಗೆಗೆ ಬೇಕಾದ ತರಕಾರಿ ಕೊಳ್ಳಲು ಕೈಯಲ್ಲಿ ಪ್ಲಾಸ್ಟಿಕ್ ಚೀಲ ಹಿಡಿದು ವಿವಿಧ ಬಡಾವಣೆಗಳ ಮಾರ್ಕೆಟ್ ಬಳಿ ಜನ ಕುರಿಗಳಂತೆ ಜಮಾಯಿಸುತ್ತಾರೆ.

ಈ ಬೆಂಗಳೂರಿನಲ್ಲಿ ಸಂಜೆಯ ಹೊತ್ತು ಸ್ವಲ್ಪವೇ ಸ್ವಲ್ಪ ಉಸಿರಾಡಬಹುದಾದ ಸ್ಥಳವೆಂದರೆ ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕ್. ಸಂಜೆಯಾದರೆ, ಅವೂ ಮಾಜಿ ಪ್ರೇಮಿಗಳಿಂದ, ಹೊಸ ಪ್ರಣಯಿಗಳಿಂದ, ಸಲಿಂಗ ಕಾಮಿಗಳಿಂದ ಮತ್ತು ಗಾಂಜಾ ಭಕ್ತರಿಂದ ತುಂಬಿ ತುಳುಕಾಡಲಾರಂಭಿಸುತ್ತವೆ. ಸದ್ಯ, ಲಾಲ್‌ಬಾಗ್‌ನಲ್ಲಿ ಬೆಳೆಯುವ ಹುಲ್ಲು ಇನ್ನೂ ಕೃತಕವಾಗದೆ ನೈಜವಾದ ಹುಲ್ಲನ್ನೇ ಬಳಸುತ್ತಿದ್ದಾರೆ.

–ಶೀನು

ಗಾಂಧೀ ಸವಾಲು-ಒಂದು ಕರೆ

೧೯೯೦ ನವಂಬರ್ ೨ ರಿಂದ ೧೧

ಭಾರತ ಇಂದು ಸಂಕಷ್ಟದ ಪರಿಸ್ಥಿತಿಯಲ್ಲಿ ಹಾದು ಹೋಗುತ್ತಿದೆ. ಈ ಪರಿಸ್ಥಿತಿ ವ್ಯಕ್ತಿ ಸಮಷ್ಟಿಗಳೆರಡರ ಮೇಲೂ ಪ್ರಭಾವ ಬೀರುತ್ತಿದೆ.

—ಇಂದು ೨೮ ಕೋಟಿ ಜನ ಬಡತನದ ರೇಖೆಯ ಕೆಳಗೆ ಬದುಕುತ್ತಿದ್ದಾರೆ.

—ನಾಲ್ಕು ಕೋಟಿ ನಿರುದ್ಯೋಗಿಗಳು ಮತ್ತು ಎಂಟು ಕೋಟಿ ಅರೆ ನಿರುದ್ಯೋಗಿಗಳಿದ್ದಾರೆ. ಪ್ರತಿ ಪಂಚವಾರ್ಷಿಕ ಯೋಜನೆಯ ಬಳಿಕವೂ ಈ ಸಂಖ್ಯೆ ಏರುತ್ತಲೇ ಇದೆ.

—ಹಳ್ಳಿಗಳು ಪಟ್ಟಣಗಳ ವಸಾಹತುಗಳಾಗಿವೆ.

—ನೀರು, ನೆಲ, ಗಾಳಿ ಮಲಿನಗೊಳ್ಳುತ್ತಿವೆ.

—ಒಂದು ಲಕ್ಷ ಕೋಟಿ ರೂಪಾಯಿಗಳ ಸಾಲದ ಹೊರೆ ಇದೆ.

—ಇಡೀ ಅರ್ಥ ವ್ಯವಸ್ಥೆಯೇ ಜನ ವಿರೋಧಿಯಾಗಿದೆ. ಜನತಾಂತ್ರಿಕ ವ್ಯವಸ್ಥೆ ಮತ್ತು ಸಂಸ್ಥೆಗಳು ಶಿಥಿಲವಾಗುತ್ತಿವೆ.

—ಚುನಾವಣೆ ಹಿಂಸೆ, ಹಣ ಮತ್ತು ಜಾತಿಗಳ ಮೇಲಾಟವಾಗಿ ಪರಿಣಮಿಸಿದೆ.

—ಭಯೋತ್ಪಾದನೆ ಹೋರಾಟದ ಅಪಾಯಕಾರಿ ಅಸ್ತ್ರವಾಗಿ ಪರಿಣಮಿಸಿದೆ.

—ಸಾಮಾಜಿಕವಾಗಿ ದಲಿತರ, ಆದಿವಾಸಿಗಳ ಸಂಕಷ್ಟ ಹೆಚ್ಚುತ್ತಿದೆ.

—ಸಂಕುಚಿತ ಸಂಪ್ರದಾಯವಾದ, ಧರ್ಮಾಂಧತೆ ಹೆಚ್ಚುತ್ತಿದೆ.

—ನಲವತ್ತು ವರ್ಷಗಳ ಹಿಂದೆ ವಾರ್ಷಿಕವಾಗಿ ಕೇವಲ ೪೦ ಕೋಟಿ ರೂಪಾಯಿ ಆದಾಯತರುತ್ತಿದ್ದ ಮದ್ಯ ಇಂದು ವಾರ್ಷಿಕ ೩೦೦೦ ಕೋಟಿ ರೂಪಾಯಿಗಳ ಆದಾಯದ ದುರ್ವ್ಯಸನವಾಗಿ ಪರಿಣಮಿಸಿದೆ.

—ಅಭಿವೃದ್ಧಿಯ ತಪ್ಪು ಕಲ್ಪನೆ ಈ ದುರವಸ್ಥೆಗೆ ಕಾರಣವಾಗಿದೆ. ಲೋಭವನ್ನು ಮಾಧ್ಯಮವನ್ನಾಗಿ ಮಾಡಿಕೊಂಡ ಮಾರುಕಟ್ಟೆಯ ಅರ್ಥ ನೀತಿಯ ಮೂಲಕ ಬಡತನ ನಿವಾರಣೆಯಾದೀತೆಂದು ಪ್ರಪಂಚವೇ ಭಾವಿಸಿದೆ.

—ಕಲ್ಯಾಣಕಾರಿ ರಾಜ್ಯ ವ್ಯವಸ್ಥೆ ಜನತೆಯ ದುಃಖವನ್ನು ನೀಗೀತೆಂಬ ನಂಬಿಕೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪರ್ಯಾವಸಾನವಾಗಿ ಕಾರ್ಮಿಕರ ಶೋಷಣೆ ನಾಂದಿ ಹಾಡಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಬಂದ ಸಾಮ್ಯವಾದ ಭಯ ಮತ್ತು ದಬ್ಬಾಳಿಕೆಗಳ ನಿರಂಕುಶ ಪ್ರಭುತ್ವವಾಗಿ ಪರಿಣಮಿಸಿತು.

—ಇವೆರಡೂ ವ್ಯವಸ್ಥೆಗಳು ಕೇಂದ್ರೀಕರಣ, ಪರಿಸರದ ಹಾನಿ, ಅಣುಶಕ್ತಿಯ ಅಪಾಯಗಳನ್ನು ಸೃಷ್ಟಿಸಿವೆ. ತಾಂತ್ರಿಕ, ಕೈಗಾರಿಕಾ ಶಕ್ತಿಯಲ್ಲಿ ಅನನ್ಯ ನಂಬಿಕೆಯಿಟ್ಟಿರುವ ಈ ಎರಡೂ ವ್ಯವಸ್ಥೆಗಳಲ್ಲೂ ಕುಟುಂಬ ಕಲ್ಪನೆ ಕುಸಿದಿದೆ. ಸಮಾಜವು ವಿವಿಧ ವ್ಯಸನಗಳಿಗೆ ತುತ್ತಾಗಿದೆ. ಮಿತಿ ಇಲ್ಲದ ಭೋಗವಾದದಿಂದಾಗಿ ವಸುಂಧರೆಯ ಸಂಪತ್ತು ಖಾಲಿಯಾಗತೊಡಗಿದೆ.

—ಈ ಹಂತದಲ್ಲಿ ನೋಬೆಲ್ ಪಾರಿತೋಷಕ ವಿಜೇತ ಮೂವತ್ತಾರು ಗಣ್ಯರು ಗಾಂಧೀ ಮಾರ್ಗದ ಅನುಸರಣೆ ಮಾಡಬೇಕೆಂದು ಹೇಳಿರುವುದು ಗಮನಾರ್ಹ.

—ನಮ್ಮ ದೇಶದಲ್ಲೂ ಸದ್ಯದ ಪಕ್ಷಗಳಿಂದ, ಆಡಳಿತದಿಂದ ಮೂಲಭೂತ ಭೌತಿಕ ಪ್ರಶ್ನೆಗಳು ಬಗೆಹರಿದಿಲ್ಲ ಮತ್ತು ನೈತಿಕತೆ ದಿವಾಳಿ ಎದ್ದಿದೆ ಎಂಬುದು ಮತದಾರರಿಗೂ ಅರಿವಾಗಿದೆ. ಈ ನೈತಿಕ ದಿವಾಳಿತನ ಕೇವಲ ರಾಜಕೀಯ ಪಕ್ಷಗಳಲ್ಲಷ್ಟೇ ಅಲ್ಲ, ಸಮಾಜ ವ್ಯಾಪಿಯಾಗಿದೆ.

—ಈ ಹಿನ್ನೆಲೆಯಲ್ಲಿ ಗಾಂಧೀಜಿಯ ಕಲ್ಪನೆಯ ಸ್ವರಾಜ್ಯವನ್ನು ಸ್ಥಾಪಿಸುವತ್ತ ಜನ ಸಂಘಟನೆ, ಜನಶಿಕ್ಷಣ ಎರಡೂ ಆಗಬೇಕಾಗಿದೆ.

—ಈ ಸ್ವರಾಜ್ಯದ ಸ್ಥಾಪನೆಗೆ ಗ್ರಾಮೀಣ ಸಮಾಜದ ಸ್ವಯಂ ಸಂಪೂರ್ಣತೆ ಸಾಧಿತವಾಗಬೇಕಾಗಿದೆ. ಗ್ರಾಮೋದ್ಯೋಗ, ಕೃಷಿ, ಪಶುಸಂಪತ್ತಿಯ ಅಭಿವೃದ್ಧಿ ಆಗಬೇಕು. ರಾಜನೈತಿಕ ಅಧಿಕಾರದ ವಿಕೇಂದ್ರೀಕರಣದ ಪ್ರಯತ್ನ ನಡೆಯಬೇಕು. ನಮ್ಮ ನೇತಾರರು ಸ್ವರಾಜ್ಯವನ್ನು ಅಧಿಕಾರಶಾಹಿ, ಬಂಡವಾಳಶಾಹಿ, ನೌಕರಶಾಹಿ ಹಾಗೂ ಗೂಂಡಾಗಿರಿ ಎಂಬ ಚತುರ್ಮುಖ ರಾಕ್ಷಸನ ಕೈಗೆ ನೀಡಿದ್ದಾರೆ. ಈ ಸ್ಥಿತಿಯನ್ನು ಬದಲಾಯಿಸುವುದಕ್ಕೆ ಗ್ರಾಮಸಭೆಯ ಸಂಕಲ್ಪವಾಗಬೇಕು.

—ಈ ನಿಟ್ಟಿನಲ್ಲಿ ಇದೇ ೧೯೯೦ ರ ನವೆಂಬರ್ ೨ ರಿಂದ ೧೧ ರವರೆಗೆ ೧೦ ದಿನಗಳ ಕಾಲ ದೇಶಾದ್ಯಂತ ಹಳ್ಳಿ ಹಳ್ಳಿಗಳಲ್ಲಿ ಪಾದಯಾತ್ರೆಯ ಮೂಲಕ ಗಾಂಧಿ ವಿಚಾರದ ಮೂಲಕ ಪರಿವರ್ತನೆಯ ಚಳುವಳಿಯನ್ನು ಕೈಗೊಳ್ಳಲಾಗುವುದು. **'ಗಾಂಧೀ ಸವಾಲು'** ಎಂಬ ಈ ಕಾರ್ಯಕ್ರಮಕ್ಕೆ ನಿಮ್ಮ ಬೆಂಬಲ ನೀಡಿ.

ನೀವು ಭಾಗಿಯಾಗಲು ಇಚ್ಛಿಸುವುದಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕರ್ನಾಟಕ ಸರ್ವೋದಯ ಮಂಡಲ,

ಆಡಳಿತ ಕಛೇರಿ ; ಮೇಲುಕೋಟೆ ೫೭೧೪೩೧, ಮಂಡ್ಯ ಜಿಲ್ಲೆ

ಸಂಕ್ಷಿಪ್ತ

ಇದೇ ಆಗಸ್ಟ್ ೧೬ ರಿಂದ ಸೆಪ್ಟೆಂಬರ್ ೧೬ ರ ವರೆಗೆ ಜನಪದ ಸೇವಾ ಟ್ರಸ್ಟಿನ 'ಹೊಸ ಜೀವನ ದಾರಿ' ಕೇಂದ್ರದಲ್ಲಿ ೨೦ ಮಂದಿ ಯುವಕರ ಶಿಬಿರವೊಂದು ನಡೆಯಲಿದೆ. ಇವರೆಲ್ಲಾ ಇಂಗ್ಲೆಂಡ್ ಎಡಿನ್‌ಬರೋ ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿಗಳು. ನಮ್ಮ ದೇಶದ ಸಾಂಸ್ಕೃತಿಕ–ಸಾಮಾಜಿಕ ಸ್ಥಿತಿಗತಿ, ಗಾಂಧಿ ವಿಚಾರಗಳನ್ನು ಅರಿಯುವ ಉತ್ಸಾಹ ತೋರಿಸಿರುವ ಈ ವಿದ್ಯಾರ್ಥಿಗಳು ತಮ್ಮ ಸ್ವಂತ ಶ್ರಮದಿಂದ 'ಹೊಸ ಜೀವನ ದಾರಿ' ಕೇಂದ್ರದಲ್ಲಿ ಸಾಮೂಹಿಕ ಊಟದ ಮನೆಯನ್ನು ಕಟ್ಟುವವರಿದ್ದಾರೆ. ೧೯೮೬ ರಲ್ಲಿ ಟ್ರಸ್ಟಿನಲ್ಲಿ ಕೆಲಕಾಲವಿದ್ದ ಬೆಂಜಮಿನ್ ಕೋರಿ ಎಂಬ ವಿದ್ಯಾರ್ಥಿಯ ಪ್ರಯತ್ನದ ಫಲ ಇದು. ನೀವು ಭಾಗಿಯಾಗಲು ಸ್ವಾಗತ.

ಸೆಪ್ಟೆಂಬರ್ ೨ ರಂದು ಬಾಂಗ್ಲಾ ದೇಶದ ಐವರು ಮಹಿಳಾ ವೈದ್ಯೆಯರಿರುವ ತಂಡವೊಂದು ಟ್ರಸ್ಟಿಗೆ ಭೇಟಿ ನೀಡಲಿದೆ. ಭಾರತದಲ್ಲಿ ಗ್ರಾಮೀಣ ಪರಿಸರದಲ್ಲಿ ಅಂಗವಿಕಲರ ಪುನರ್ವಸತಿ ಬಗ್ಗೆ ಅಧ್ಯಯನ ಮಾಡಲು ಬರುತ್ತಿರುವ ಈ ತಂಡದ ಜೊತೆ ವಿಶಿಷ್ಟ ವಿಚಾರ ವಿನಿಮಯ ನಡೆದೀತೆನ್ನುವ ಆಶಯ ನಮ್ಮದು.

ಮುಂಬಯಿಯಲ್ಲಿ ಟ್ರಸ್ಟೀಶಿಪ್ ಆಧಾರದ ಮೇಲೆ ಕೆಲವು ಯುವಕರು ಪುಸ್ತಕದ ಅಂಗಡಿಯೊಂದನ್ನು ತೆರೆದಿದ್ದಾರೆ. ಪ್ರಯೋಗ ಇನ್ನೂ ಎಳವೆಯಲ್ಲಿದೆ.

ಜನಪದ ವಿಚಾರ

- ನಿಮಗಿಷ್ಟವಾದರೆ ನಿಮ್ಮ ಮಿತ್ರರಿಗೂ ಚಂದಾದಾರರಾಗಲು ತಿಳಿಸಿ
- ವಾರ್ಷಿಕ ಚಂದಾ ಜುಲೈ ೧೯೯೦ ರಿಂದ ೨೫ ರೂ.
- ಪತ್ರಿಕೆ ತಲುಪದಿದ್ದರೆ, ನಿಮ್ಮ ವಿಳಾಸ ಬದಲಾದರೆ ನಮಗೆ ತಿಳಿಸಿ,
- ಲೇಖನಗಳನ್ನು ಕಳುಹಿಸಿ.

ಸಾಮಾಜಿಕ, ಆರ್ಥಿಕ ವಿಶ್ಲೇಷಣೆಗಳ ಅಧ್ಯಯನ ವರದಿಗಳಿಗೂ ಸ್ವಾಗತ.

ನಮ್ಮ ವಿಳಾಸ :– **ಜನಪದ ವಿಚಾರ**
ಜನಪದ ಸೇವಾ ಟ್ರಸ್ಟ್,
ಮೇಲುಕೋಟೆ–571431
ಕರ್ನಾಟಕ.

ಜನಪದ ಸೇವಾ ಟ್ರಸ್ಟ್ ಪ್ರಕಟಣೆಗಳು

ಒಂದು ಹುಲ್ಲಿನ ಕ್ರಾಂತಿ

ಪ್ರಾಕೃತಿಕ ವ್ಯವಸಾಯ–ಒಂದು ಪರಿಚಯ

ಮೂಲ : ಮಸನೋಬು ಫುಕುವೊಕಾ ಕನ್ನಡಾನುವಾದ : ಸಂತೋಷ್ ಕೌಲಗಿ **ಬೆಲೆ : 15 ರೂ.**

ಮನುಕುಲ ವಿನಾಶ: ಬಾಂಬ್ ಬೇಕಿಲ್ಲ ಅಣುಸ್ಥಾವರ ಸಾಕು

ಡಾ॥ ಎ. ಎಸ್. ನಾಗರಾಜ್

ಬೆಲೆ : 2–00 ರೂ.

ಮಾರಾಟಕ್ಕೆ

ಕಾವ್ಯಸುಧಾ ಎಂ. ಎಸ್. ನರಸಿಂಹಮೂರ್ತಿ

ಬೆಲೆ : 12–00 ರೂ.

ಕಾಂಪೋಸ್ಟ್ ಗೊಬ್ಬರದ ಚಮತ್ಕಾರ

ಬೆಲೆ : 5–00 ರೂ.

KRNM 44

T.L.Bhyara Shetty
Cloth Merchant
Melukote 571431

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಮೇಲುಕೋಟೆಯ
ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದಲ್ಲಿ, ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.
ಸಂಪಾದಕರು : ಎಸ್. ಪಟ್ಟಾಭಿರಾಮನ್ ಸಹಾಯಕ ಸಂಪಾದಕರು : ಸುರೇಂದ್ರ ಕೌಲಗಿ